ಹಿತ್ತಲಗಿಡ

ಚಾತುರ್ಮಾಸಿಕ

ಪೈರು 5, ಕೊಯಿಲು 2, ಮೇ - ಆಗಸ್ಟ್, 1999

'ಹಿತ್ತಲಗಿಡ' ರೈತ, ವಿಜ್ಞಾನಿ,
ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಬಿಡಿ ಪತ್ರಿಕೆ : ರೂ. 20/-

ಕಣ್ಣೀರಿದ್ದರೆ ಸುರಿಸಲು ತಯಾರಾಗಿ



ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು
ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಕಲೆ : ಸೋಮವರದ ಮತ್ತು ಅಭಿಶೋಧ್

ಸಂಪಾದಕೀಯ

"ನಮ್ಮ ಅಭಿವೃದ್ಧಿಗೆ 'ಹೊರಗಿನ' ಹಣ ಮತ್ತು ತಂತ್ರಜ್ಞಾನಗಳು ಬೇಕೇ ಬೇಕೆ ? ಜಾಗತೀಕರಣದ ಈ ಬಲವಾದ ಹೊಡೆತದ ಎದುರು ನಮ್ಮ ಅತ್ಯಂತ ಮೂಲ ಸಾಮಾಜಿಕ ಘಟಕವಾದ ಗ್ರಾಮಗಳ ಪರಿಸ್ಥಿತಿ ಏನಾಗಬಹುದೆಂಬ ಕಲ್ಪನೆ ನಮಗಿದೆಯೆ ? ನಾವು ಉಣ್ಣುವ ಆಹಾರವನ್ನೂ ಆಮದು ಮಾಡಿಕೊಳ್ಳಬೇಕಾಗುವಂತಹ ಸ್ಥಿತಿ ತಲೆದೊರಿದರೆ ಅದರ ಭೀಕರತೆಯ ಅರಿವು ನಮಗಿದೆಯೇ ?" ಇವು ನಮ್ಮ ಹಿರಿಯ ಸಮಾಜವಾದಿ ಚಿಂತಕ ಒರಿಸ್ಸಾದ ಕಿಶನ್ ಪಟ್ನಾಯಕ್ ಬೆಂಗಳೂರು ಕೃಷಿವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳ ಮುಂದಿಟ್ಟಿರುವ ಗಂಭೀರ ಪ್ರಶ್ನೇಗಳು. ಈ ಪ್ರಶ್ನೆಗಳೇ 'ಹಿತ್ತಲಗಿಡ' ಇದುವರೆಗೂ ಹೇಳಬಯಸುತ್ತಿರುವುದರತ್ತ ನಮ್ಮನ್ನು ಪರೋಕ್ಷವಾಗಿ ಚಿಂತನೆಗೆ ಹಚ್ಚುವಂತೆ ಮಾಡಲಿದೆ. ಅಂದಮೇಲೆ ಇದು ಪ್ರಗತಿ, ಅಭಿವೃದ್ಧಿಗೆ 'ಹೊರಗಿನದ್ದು' ಯಾವುದೂ ಬೇಡವೆನ್ನುವ ಉದ್ಧಟತನದ ಮಾತೆ ? ಖಂಡಿತಾ ಇರಲಾರದು. ಆದರೆ ಸಂಶಯದ ಮಾತೆಂದರೆ ಅಭಿವೃದ್ಧಿ, ಪ್ರಗತಿ ನೀಡುತ್ತೇವೆಂದು 'ಹೊರಗಿನಿಂದ' ಬರುವ ಆ ವಿಚಾರ, ಧನ, ಜನ, ಜ್ಞಾನ, ತಂತ್ರಜ್ಞಾನ, ಸಂಸ್ಥೆಗಳ ಸ್ಪಷ್ಟ ಮತ್ತು ನಿಘೂಡ ಉದ್ದೇಶಗಳು, ಅವುಗಳ ರಾಜಕೀಯ, ಆರ್ಥಿಕ ದೋರಣೆ ಇತ್ಯಾದಿಗಳು ಈ 'ಒಳಗಿನ'ವುಗಳ ಅಭಿವೃದ್ಧಿಗೆ ಎಷ್ಟು ಹತ್ತಿರವಾಗಿವೆ, ಪೂರಕವಾಗಿವೆ ಎನ್ನುವುದು. ಈ ಪ್ರಶ್ನೆಗೆ ಈ ಸಂಚಿಕೆಯಲ್ಲಿನ ಎರಡು ಲೇಖನಗಳು, ನರ್ಮದಾ ಕಣಿವೆಯ ಮೇಲೆ ಹೇರುತ್ತಿರುವ ಆ ಅಭಿವೃದ್ಧಿಮಾದರಿ ಮತ್ತು ನಮ್ಮರಾಜ್ಯದ ಪೂರ್ವದ ಬಯಲು ಪ್ರದೇಶದ ಅರಣ್ಯ ಮತ್ತು ಪರಿಸರ ಅಭಿವೃದ್ಧಿಯ ಹೆಸರಿನಲ್ಲಿ ಹಣ ವ್ಯಯವಾಗುತ್ತಿರುವ ರೀತಿ ನೋಡಿದರೆ ಸ್ವಲ್ಪ ಉತ್ತರ ದೊರೆಯುತ್ತದೆ. ಈ ಪ್ರಶ್ನೆಗೆ ಇನ್ನೂ ಸ್ಪಷ್ಟ ಉತ್ತರವನ್ನು ಯಾರಾದರೂ ಹುಡುಕ ಬಯಸಿದಲ್ಲಿ ಇಂದು ಬೆಂಗಳೂರು ನಗರ ಒಂದರಲ್ಲೇ ವಿವಿಧ ವಿಜ್ಞಾನ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು ನಾಯಿಕೊಡೆಗಳಂತೆ ತಲೆ ಎತ್ತಿರುವ ನೂರಾರು ಸರ್ಕಾರೇತರ ಸಂಸ್ಥೆಗಳು, ಪರಿಸರ, ಅರಣ್ಯ, ಅಂತರ್ಜಲ, ಜೀವವಿವಿಧತೆ, ದೇವರ ಕಾಡು, ಮಳೇ ಆಶ್ರಯದ ಭೂಮಿ ಇತ್ಯಾದಿಗಳ ಅಭಿವೃದ್ಧಿ, ಸಂಶೋಧನೆ, ಸಂರಕ್ಷಣೆಗೆಂದು ಮಾಡುತ್ತಿರುವ ವೆಚ್ಚದ ಮೊತ್ತ, ಅವುಗಳ ಮೂಲ, ರೀತಿ ಮತ್ತು ಫಲಿತಾಂಶಗಳತ್ತ ಕಣ್ಣು ಹಾಯಿಸುವುದು ಅತ್ಯಗತ್ಯವಾಗಿರುತ್ತದೆ. ಇದನ್ನು ಹಿತ್ತಲಗಿಡ ಇದೂವರೆಗೆ ಉತ್ತಿ ಬಿತ್ತಲು ಪ್ರಯತ್ನಿಸುತ್ತಿರುವ ವಿಚಾರಗಳತ್ತ ಹೋಲಿಸಿ ನೋಡುವುದೂ ಅಷ್ಟೆ ಸೂಕ್ತವಾಗಿರುತ್ತದೆ.

ಅಭಿವೃದ್ಧಿಗೆ ಈ ರೀತಿ 'ಹೊರಗಿನ' ಹಸ್ತಕ್ಷೇಪ ಸೂಕ್ತವಲ್ಲ ಅಂದಮೇಲೆ ನರ್ಮದಾ ಕಣಿವೆಯಲ್ಲಿ ನಡೆಯುತ್ತಿರುವಂತಹಾ ಹೋರಾಟ, ಚಳುವಳಿಗಳಿಗೆ ವಿಚಾರ, ಪ್ರೇರಣೆ, ವ್ಯಕ್ತಿಗಳು, 'ಹೊರಗಿನಿಂದ' ಬರುವದು ಎಷ್ಟು ಸೂಕ್ತ ಎಂಬ ಪ್ರಶ್ನೆಯೂ

ಸಂಪಾದಕೀಯ

ಏಳಬಹುದಲ್ಲವೆ? ಈ ಪ್ರಶ್ನೆಯನ್ನು ಒಪ್ಪಲು ಕೆಲವರಿಗೆ ಕಷ್ಟವಾಗಿರಬಹುದು. ಆದರೆ ಇಂದು ನರ್ಮದಾ ಕಣಿವೆಯಲ್ಲಿನ ಪರಿಸರ, ಅದಕ್ಕೆ ಹೊಂದಿಕೊಂಡಂತಹ ಆದಿವಾಸಿಗಳ ಜೀವನ ರೀತಿಯನ್ನು ಸಂರಕ್ಷಿಸಿ ಕೊಳ್ಳುವ ಹೋರಾಟಕ್ಕೆ ಅರುಂಧತಿ ರಾಯ್‌ರಂತಹ ನಗರ ಸಂಸ್ಕೃತಿಯ ದಟ್ಟ ಹಿನ್ನೆಲೆಯ ಬುದ್ಧಿಜೀವಿಗಳ 'ಹಸ್ತಕ್ಷೇಪ' ಅತೀಯಾಗುತ್ತಿದೆ ಮತ್ತು ಇಲ್ಲಿ ಮೂಲ ವಿಚಾರ ದಾರಿ ತಪ್ಪುವ ಸಾದ್ಯತೆ ಇದೆ ಎಂಬ ಸಂಶಯ ಏಳುತ್ತಿದೆ. ಈ ಹೋರಾಟ ಒಳಗಿನಿಂದ ಎದ್ದಿದೇ ಆದಲ್ಲಿ ಅದು ಗುಜರಾತ್ ಮತ್ತು ಮಹಾರಾಷ್ಟ್ರದ ಆ ಬೆಟ್ಟು ಬೆಂಡಾಗಿರುವ ಒಣ ಕೃಷಿ ಭೂಮಿಯ ಮೇಲೆ ನಿಂತಿರುವ ಲಕ್ಷಾಂತರ ಬಡ ರೈತರನ್ನೂ ಒಳಗೊಂಡಿರಬೇಕಾಗಿತ್ತು. ಹಾಗೇ, ಈ ಬೃಹತ್ ಆಣೇಕಟ್ಟಿನ ಭ್ರಮೆಯಿಂದ ಆ ರೈತರನ್ನು ಹೊರತಂದು, ಮಳೆ ಆಶ್ರಯದ ಒಣಭೂಮಿ ಅಭಿವೃದ್ಧಿಯ ಪರ್ಯಾಯ ಯೋಜನೆಯನ್ನು, ನದಿಗೆ ಚಿಕ್ಕ ಪುಟ್ಟ, ಅಡ್ಡತಡೆಹಾಕಿ ಭೂಮಿ ಮುಳುಗದ ರೀತಿಯಲ್ಲಿ ನೀರು ಹಿಡಿದು ಉಪಯೋಗಿಸುವ ಸಾದ್ಯತೆಯನ್ನು ಮುಂದಿಟ್ಟು ಅವರನ್ನೂ ಚಳುವಳಿಗೆ ಪ್ರೇರೇಪಿಸಬೇಕಾಗಿತ್ತು. ಹಾಗೇ ಆ ಲಕ್ಷಾಂತರ ಆದಿವಾಸಿಗಳ ಕನಿಷ್ಟ ಅಗತ್ಯವನ್ನು ಪೂರೈಸಿ, ಜೀವನ ಮಟ್ಟವನ್ನು ಮೇಲೆತ್ತುವ ದಾರಿ ಸ್ಪಷ್ಟಪಡಿಸಬೇಕಾಗಿತ್ತು. ಮೇಧಾ ಪಾಟ್ಕರ್‌ರ ಮಹಾನ್ ವ್ಯಕ್ತಿತ್ವವನ್ನು ಕಿಂಚಿತ್ತೂ ಪ್ರಶ್ನಿಸುವುದು ನಮ್ಮ ಉದ್ದೇಶವಲ್ಲದಿದ್ದರೂ, ಈ 'ಒಳಗಿನ-ಹೊರಗಿನವುಗಳ' ಜಿಜ್ಞಾಸೆಯಲ್ಲಿ ಮಳೇ ಅಶ್ರಯದ ಕೃಷಿ ಅಭಿವೃದ್ಧಿಯನ್ನು ಒಂದು ಹೋರಾಟವಾಗಿ ಪರಿವರ್ತಿಸಿದ ರಾಲಿಗಾಂಸಿದ್ಧಿಯ ಅಣ್ಣಾಹಜಾರೆಯಾಗಲೀ, ಅಂತರ್ಜಲದ ಸಮಾನ ಹಂಚಿಕೆಯಲ್ಲಿ 'ಪಾನಿ ಪಂಚಾಯ್ತಿ' ಚಳುವಳಿಯನ್ನೇ ಹುಟ್ಟುಹಾಕಿದ ಮಹಾರಾಷ್ಟ್ರದ ವಿಲಾಸ್‌ರಾವ್ ಸೋಲಂಕಿಯಾಗಲೀ ಅಥವಾ ಚಿಕ್ಕಪಡಸಲಗಿ ಬ್ಯಾರೇಜ್ ನೀರಾವರಿಯೋಜನೆಯ ಮೂಲಕ ಜನಮನವನ್ನು ಗೆಲ್ಲಬಹುದೆಂದು ತೋರಿಸಿಕೊಟ್ಟಿರುವ ನಮ್ಮ ಸಿದ್ದುನ್ಯಾಮಗೌಡ ಪಾಟೀಲರಾಗಲಿ ಹೆಚ್ಚು ಸೂಕ್ತವಾಗುತ್ತಾರೆಂಬುದನ್ನು ತಿಳಿಸುವ ಪ್ರಯತ್ನವಾಗಿದೆ. ಹಾಗೇ ನಮ್ಮ ಕಿಶನ್ ಪಟ್ನಾಯಕರು ಎತ್ತಿರುವ ಪ್ರಶ್ನೆಗಳನ್ನು ಹಿತ್ತಲಗಿಡ ಅರ್ಥೈಸಿಕೊಳ್ಳುವ ಪ್ರಯತ್ನವೂ ಇದಾಗಿದೆ.

★ ★ ★

ರಾಷ್ಟ್ರದ ಒಟ್ಟು ಕೆರೆಗಳಲ್ಲಿ ಸುಮಾರು ಕಾಲುಭಾಗ ನಮ್ಮ ಕರ್ನಾಟಕದಲ್ಲಿತ್ತು ಎಂಬ ಅಂಕಿ ಅಂಶ ದೊರಕಿದೆ. ಇವುಗಳಲ್ಲಿ ಬಹುಪಾಲು ಹಾಳಾಗಿದ್ದರೂ ಸುಮಾರು 25,000 ಕೆರೆಗಳು ಇನ್ನೂ ಅಸ್ಥಿತ್ವದಲ್ಲಿವೆ ಎಂಬುದು ನಮ್ಮ ಸುದೈವ . ಈ ಕೆರೆಗಳ ಜೀರ್ಣೋದ್ಧಾರವೆಂದರೆ ಅದು ಬರಿದೇ ಅಭಿವೃದ್ಧಿಯ ಮಾತಲ್ಲ. ದೇಶದ ಜೀವನಾಧಾರ ಘಟಕವಾದ ನಮ್ಮ ಗ್ರಾಮಗಳನ್ನು ಉಳಿಸಿ ಬೆಳೆಸುವುದೂ, ಆ ಮೂಲಕ ಅಲ್ಲಿನ ಪರಿಸರ, ಸಾಮಾಜಿಕ ಬದುಕು ಸಂಸ್ಕೃತಿಗಳೆಲ್ಲವನ್ನೂ ಕಾಪಾಡುವ ವಿಚಾರವಾಗಿದೆ. ಇದೇ ನಾವು ಮೇಲೆ ಚರ್ಚಿಸಿರುವ 'ಒಳಗಿನಿಂದಲೇ' ಮೆಲೇಳುವ ಪ್ರಗತಿಯ ಮಾತಾಗಿರುತ್ತದೆ.

★ ★ ★

ಗ್ರಾಮದೇವತೆ ಹಬ್ಬದ ಆಚರಣೆ ಹೆಸರಿನಲ್ಲಿ ಕೆಲವುಹಳ್ಳಿಗಳಲ್ಲಿ, ಅದೂ ಬೆಂಗಳೂರಿನ ಸುತ್ತ ಮುತ್ತ ಗ್ರಾಮಸ್ಥರು ಮುಗ್ಧ ಕಾಡುಪ್ರಾಣಿಗಳನ್ನು ಅಮಾನುಷ ರೀತಿಯಲ್ಲಿ ಬಲಿಕೊಡುವ ವಿಚಾರ ನಮ್ಮನ್ನು ಕಂಗೆಡೆಸುವಂತೆಮಾಡಿದೆ. ಜಾತಿಪದ್ಧತಿ, ಸತಿ, ಅಸ್ಪೃಶ್ಯತೆಗಳಂತಹ ನಮ್ಮ ದೇಶೀಯ ಸಂಪ್ರದಾಯ, ಪರಂಪರೆಗಳ ವಿಕಾರ ಮುಖಗಳ ಅರಿವು ನಮಗೆ ಚೆನ್ನಾಗಿತ್ತು. ಆದರೆ ಪರಿಸರ, ಜೀವವಿವಿಧತೆಗಳ ರಕ್ಷಣೆಯಲ್ಲಿ ಒಟ್ಟಾರೆ ಸುಸ್ಥಿರ ಅಭಿವೃದ್ಧಿಯ ಸಾಧನೆಯಲ್ಲಿ ಈ ದೇಶಿಯ ಸಂಸ್ಥೆಗಳ ಪಾತ್ರವೂ ಇದೆಯೆಂದು ಇವುಗಳ ಬಗ್ಗೆ ಹಿತ್ತಲಗಿಡ ಒತ್ತುಕೊಡುತ್ತ ಬಂದಿತ್ತು. ಆದರೆ, ಈ ಮೇಲಿನ ಪಶುಬಲಿ ವಿಚಾರ ನಮ್ಮನ್ನು ಮತ್ತಷ್ಟು ಜಾಗರೂಕ ವಾಗಿರುವಂತೆ ಮಾಡಿದೆ. ಈ ನಿಟ್ಟಿನಲ್ಲಿ ನಮ್ಮ ಗೆಳೆಯರಾದ INCERTನ ಎಸ್. ಶ್ರೀದರ್‌ರವರು ನಡೆಸುತ್ತಿರುವ ಹೋರಾಟ ಪ್ರಶಂಸಾರ್ಹ.

★ ★ ★

ಹೊನ್ನೇರು ಸ್ವರ್ಧೆಯಲ್ಲಿ ಆಸಕ್ತಿಯಿಂದ ಭಾಗವಹಿಸಿದ ಶಾಲಾ ಮಕ್ಕಳು ಕಷ್ಟಪಟ್ಟು ಸಂಗ್ರಹಿಸಿದ ಜಾನುವಾರು ಚಿಕಿತ್ಸೆಕ್ರಮಗಳನ್ನು ಪ್ರಕಟಿಸಿರುವೆವು. ಇವುಗಳ ವೈಜ್ಞಾನಿಕ ಆಯಾಮ, ಕಾರಾರು ವಕ್ಕುತನಗಳ ಬಗ್ಗೆ ಮಾತ್ರವೇ ತಲೆಕೆಡಿಸಿಕೊಳ್ಳದೆ ಈ ಮೂಲಕ ನಮ್ಮ ಎಳೆಯರಲ್ಲಿ ಜೀವ ವಿವಿಧತೆ, ದೇಶೀಯ ಜ್ಞಾನಗಳ ಬಗ್ಗೆ ಆಸಕ್ತಿ ಉಂಟಾಗುವುದು ಮಾತ್ರವಲ್ಲ ಆದರಿಂದ ಈ 'ಒಳಗಿನಿಂದಲೇ' ಮೇಲೇಳುವ ಪ್ರಗತಿಗೂ ಸಹಾಯವಾಗುತ್ತದೆ ಎಂಬುದನ್ನು ನಮ್ಮ ವಿಜ್ಞಾನಿಗಳು, ಪಶು ವೈದ್ಯರೂ ಅರಿಯುತ್ತಾರೆಂದು ಆಶಿಸುತ್ತೇವೆ.

★ ★ ★

ಇನ್ನು ಪ್ರೊ. ಅನೀಲಗುಪ್ತಾಜಿಯವರು ನಮ್ಮ ಹತ್ತಿ ಬೆಳೆಗಾರರು ಕಂಗೆಟ್ಟು ಆತ್ಮಹತ್ಯಗಿಳಿದಿರುವುದು ಈ ದೇಶದ ದುರಂತದ ಪರಾಕಾಷ್ಟೆಎಂದಿದ್ದು ಇದು ಮತ್ತೆ ಮರುಕಳಿಸದಿರಲಿ ಎಂದು ಹೇಳುತ್ತಿರುವಾಗಲೇ ಹಸಿರು ಕ್ರಾಂತಿಯ ತವರು ಎನಿಸಿದ್ದ ಪಂಜಾಬಿನಲ್ಲೇ ಹತ್ತಿ ಬಳೆಗಾರರು ಆತ್ಮ ಹತ್ಯಗಿಳಿದಿರುವ ವರದಿ ಬಂದಿದೆ. ಇವ್ಯಾವುದೂ ಮುಂಬರುವ ಚುನಾವಣೆಯ ವಿಚಾರಗಳೇ ಆಗಿಲ್ಲದಿರುವುದು ನಮ್ಮ ಜನತಂತ್ರ ವ್ಯವಸ್ಥೆಯ ದೊಡ್ಡ ವಿಪರ್ಯಾಸವನ್ನು ಎತ್ತಿ ಹಿಡಿಯುತ್ತಲಿದೆ.

ಪ್ರಕಾಶ ಕಮ್ಮರಡಿ

ಕಣ್ಣೀರಿದ್ದರೆ - ಸುರಿಸಲು ತಯಾರಾಗಿ

(If you have tears, prepare to shed them now

ವಿಲಿಯಂ ಶೇಕ್ಸ್‌ಪಿಯರ್)

ದಿನದಿಂದ ದಿನಕ್ಕೆ ವೇಗವಾಗಿ ನಾಗರೀಕತೆಯ ದೃಷ್ಟಿಯಿಂದ 'ಮಹಾ ನಗರ'ವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರದ ಸಮೀಪದಲ್ಲೇ ಇನ್ನೂ ಪ್ರಾಣಿಹತ್ಯೆ, ಬಲಿ ಪೂಜೆ ನಡೆಯುತ್ತಾ ಬಂದಿರುವುದು ವಿಪರ್ಯಾಸವೇ ಸರಿ. ಬೆಂಗಳೂರಿನ ಸುತ್ತಮುತ್ತಲಿನ ಹುಲಿಕುಂಟೆ, ಒಟ್ಟರಹಳ್ಳಿ, ಮೊದಲಾದ 6 ಗ್ರಾಮಗಳಲ್ಲಿ, ಪ್ರತಿ ವರ್ಷವೂ ಡಿಸೆಂಬರ್‌ನಿಂದ ಜನವರಿ ಮಧ್ಯೆ ನಡೆಯುವ ಗ್ರಾಮದೇವತೆಯ ಹಬ್ಬಗಳಲ್ಲಿ ಕಾಡುಪ್ರಾಣಿಗಳ ಬಲಿ ನೈವೇದ್ಯ ನೀಡುತ್ತಿರುವ ಸಂಗತಿ ಬೆಳಕಿಗೆ ಬಂದಿದೆ.

ಗ್ರಾಮದೇವತೆಯ ಹಬ್ಬದ ದಿನ ಹಳ್ಳಿಗರು ತಂಡ ತಂಡಗಳಲ್ಲಿ ಬೇಟೆಗೆ ತೆರಳಿ, ಪ್ರಾಣಿಗಳ ಬೇಟೆಯಾಡಿ, ಜೀವಂತ, ಅರೆಜೀವಂತ, ಸತ್ತ ಪ್ರಾಣಿಗಳನ್ನು ಅಮಾನುಷ ರೀತಿಯಲ್ಲಿ ಕೋಲುಗಳಿಗೆ ನೇತುಹಾಕಿ, ಮೆರವಣಿಗೆ ನಡೆಸಿ ಬಲಿ ಕೊಡುತ್ತಾರೆ. ಮಧ್ಯಾಹ್ನ ಆರಂಭವಾಗುವ ಈ ಹಬ್ಬ, ಸಂಜೆಯಾದಂತೆ ಬೇಟೆಗಾರರ ಹಬ್ಬದ ತಾಣವಾಗಿಬಿಡುತ್ತದೆ. ಕೈ, ಕಾಲು, ರೆಕ್ಕೆ ಮುರಿದ ಅರೆ ಜೀವಂತವಾಗಿ ನೋವಿನಿಂದ ನರಳಿ ಕೂಗುವ ಪ್ರಾಣಿ ಪಕ್ಷಿಗಳ ನೋವಿಗೆ ಪ್ರತಿಯಾಗಿ, ತಮಟೆ, ಡೋಲು ಬಾರಿಸಿ ಕಹಳೆ ಊದಿ ಕುಣಿಯುವ ಮನುಷ್ಯರು. ಸಂಪ್ರದಾಯಗಳ ವಿಕೃತ ರೂಪ.

ಈ ಭೂಮಿಯ ಮೇಲೆ ಬದುಕಲು ಮನುಷ್ಯರಿಗಷ್ಟೇ ಅಧಿಕಾರವೇ ? ಅಮಾಯಕ, ಅಸಹಾಯಕ, ಮೂಕ ಪ್ರಾಣಿಗಳ ಹತ್ಯೆ, ಬಲಿ ನೈವೇದ್ಯ, ರಕ್ತ ನೈವೇದ್ಯವನ್ನು ಗ್ರಾಮದೇವತೆಗಳು ಬಯಸುವವೇ ? ಈ ರೀತಿ ಪ್ರಾಣಿ - ಪಕ್ಷಿಗಳ ಬೇಟೆಯಾಡುವುದು ಹಾಗೂ ದೇವತೆಗಳಿಗೆ ಬಲಿ ನೈವೇದ್ಯ ನೀಡುವುದನ್ನು ನಿಲ್ಲಿಸಲು ಪ್ರಾಣಿ ದಯಾ ಸಂಘಗಳು ಅರಣ್ಯ ಇಲಾಖೆಯ ಜೊತೆಗೂಡಿ ಮಾಡಿದ ಪ್ರಯತ್ನಕ್ಕೆ ಈ ವರ್ಷ ಸ್ವಲ್ಪ ಗೆಲವು ಸಿಕ್ಕಿದೆ.

ಬೆಂಗಳೂರಿನ 'ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆ, ಶಿಕ್ಷಣ, ಸಂಶೋದನೆ ಮತ್ತು ತರಬೇತಿ ಸಂಸ್ಥೆ' (INCERT) ನೇತೃತ್ವದಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಅರಣ್ಯ ಇಲಾಖೆಯ ಜೊತೆಗೂಡಿ ಪ್ರಾಣಿ - ಪಕ್ಷಿಗಳ ಬೇಟೆಯಾಡುವುದು ಕಾನೂನಿನ ದೃಷ್ಟಿಯಿಂದ ಅಪರಾಧ, ಹಾಗೂ ಅದು ಪರಿಸರ ಹಾಗೂ ಪ್ರಕೃತಿಯ ಜೀವಜಾಲಕ್ಕೆ ಹಾನಿಯನ್ನುಂಟು ಮಾಡುತ್ತದೆಂದು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು.

ವನ್ಯ ಪ್ರಾಣಿ ರಕ್ಷಣಾ ಕಾಯಿದೆಯ ಅನ್ವಯ ಕಾಡುಪ್ರಾಣಿಗಳನ್ನು ಕೊಲ್ಲುವುದು ಶಿಕ್ಷಾರ್ಹ ಅಪರಾಧ. ಈ ಅಪರಾಧಕ್ಕೆ 25000 ರೂಪಾಯಿಗಳ ದಂಡ ಮತ್ತು 3 ರಿಂದ 6 ವರ್ಷಗಳ ಸೆರೆವಾಸದ ಸಜೆ ವಿಧಿಸಬಹುದು ಎಂದು ವಿವರಿಸುವುದರ ಜೊತೆಗೆ 'ಅಹಿಂಸಾ ಪರಮೋ ಧರ್ಮ' ಎಂಬ ಭಗವಾನ್ ಮಹಾವೀರರ ವಾಣಿಯ ಅರ್ಥವನ್ನು ಮನದಟ್ಟು ಮಾಡಿಸುವ ಕರಪತ್ರಗಳನ್ನು ಹಂಚಿ, ಸಭೆಗಳನ್ನು ನಡೆಸಿ ಜನರ ಮನಸ್ಸನ್ನು ತಟ್ಟುವ ಸಾಕಷ್ಟು ಪ್ರಯತ್ನ ನಡೆಸಿದರು.

ಸಾಮ, ದಾನ, ಬೇದ, ದಂಡ ಒಟ್ಟಾರೆ, ಇವುಗಳೆಲ್ಲವುಗಳ ಸಹಾಯಪಡೆದ ಸ್ವಯಂಸೇವಾ ಸಂಘಸಂಸ್ಥೆಗಳು ಈ ಬಾರಿಯ ಹಬ್ಬದಲ್ಲಿ ಸಾಕಷ್ಟು ಯಶಸ್ಸು ಪಡೆದಿದ್ದಾರೆನ್ನಬಹುದು. ಹಿಂದಿನಂತೆ ಅಬ್ಬರದ ಕ್ರೂರ, ಪಾಶವೀ ಕೃತ್ಯಗಳು, ಅದನ್ನು ವಿಜೃಂಭಿಸುವ ಮೆರವಣಿಗೆಗಳು ಇಲ್ಲವಾದವು. ಹಾಗೆಂದು ಈ ಪ್ರಾಣಿ ಬಲಿ ಸಂಪೂರ್ಣ ನಿಂತಿತೆಂದು ತೃಪ್ತಿ ಪಡಲು ಅಸಾಧ್ಯವಾಗುವಂತೆ ಅಲ್ಲೊಂದು, ಇಲ್ಲೊಂದು ಪ್ರಾಣಿ ಹತ್ಯಾ ಕೃತ್ಯಗಳು ವರದಿಯಾದವು.

ಇದು ನಮ್ಮ ದೇಶೀಯ ಸಂಸ್ಕೃತಿಯ ಮೇಲೆ ಭರವಸೆ ಇಟ್ಟುಕೊಂಡಿರುವವರೆಲ್ಲರಿಗೂ ಒಂದು ಆಘಾತವಾಗಲಿದೆ. ಆದರೆ ಇದೊಂದು ಅಪವಾದ ಮತ್ತು ನಮ್ಮ ಒಟ್ಟಾರೆ ದೇಶೀಯ ಸಂಸ್ಕೃತಿಯಲ್ಲಿ ಪರಿಸರ, ಪ್ರಾಣಿ, ಪಶುಪಕ್ಷಿಗಳ ಬಗ್ಗೆ ಪ್ರೀತಿ ಸಹನೆಗಳಿವೆ ಹಾಗೂ ಇದರಲ್ಲಿನ ಅಹಿಂಸಾತ್ಮಕ ಆಯಾಮವಾಗಲಿ ಸಮಾನತೆ, ಸಹಬಾಳ್ವೆ, ಜಾತ್ಯಾತೀತತೆ ದೋರಣೆಗಳಾಗಲಿ ಗಟ್ಟಿಯಾಗೇ ಇವೆ ಎಂದು ಹಿತ್ತಲಗಿಡ ಭರವಸೆ ಹೊಂದಿರುತ್ತದೆ.

ತೇಜಸ್ವಿನಿ ಮತ್ತು ಪ್ರಕಾಶ್

* * *

ಚಿಟ್ಟೇಪುರಕ ಹಕ್ಕಿಯ ಕಥೆಯ ಸಾರ

ಕಳೆದ ಬಾರಿಯ ಮುಖಪುಟ ಚಿತ್ರಕ್ಕೆ ಬಹುಮಾನ ಪಡೆದ ಪ್ರತಿಕ್ರಿಯೆ

ನರಿಯ ಕುತಂತ್ರ ಬುದ್ಧಿಯು ವಿದೇಶಿ ಕಂಪನಿಗಳು ನಮ್ಮ ದೇಶವನ್ನು ಆಕ್ರಮಿಸಿ ಎಲ್ಲವನ್ನು ದೋಚುತ್ತಿರುವುದನ್ನು ಸೂಚಿಸುತ್ತದೆ. ಆದ್ದರಿಂದ ನಾವು ಚಿಟ್ಟೆಪುರಕ ಹಕ್ಕಿಯ ಹಾಗೆ ಬುದ್ಧಿವಂತಿಕೆಯಿಂದ ಬಿಸಿ ಪಾಯಸ ಕಾಯಿಸುವ ತರಾತುರಿ ನಡಸಬೇಕಾಗಿದೆ. ಬಿಸಿ ಪಾಯಸ ಕುಡಿಸಿ ಎಲ್ಲವನ್ನು ಕಕ್ಕಿಸಬೇಕಾಗಿದೆ, ಆದಷ್ಟು ಬೇಗ ನಾವು ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕು. ಆದಷ್ಟು ಸ್ವದೇಶಿ ವಸ್ತುಗಳನ್ನು ಉಪಯೋಗಿಸಿ ದೇಶದ ಸ್ವಾಭಿಮಾನವನ್ನು ಕಾಪಾಡಬೇಕು.

ರೇಖಾ ಎಂ.ಎಸ್., ಮಾದರಹಳ್ಳಿ, ಟಿ ನರಸಿಪುರ ತಾ||

ದೇಶೀಯ ಹತೋಟಿ ಕ್ರಮಗಳು

ಹೊಲದಲ್ಲೇ ಆಲೂಗಡ್ಡೆಯ ಶೇಖರಣೆ !

ಹೊಸಕೋಟೆ ತಾಲ್ಲೂಕಿನ ಬೆಂಡಗಾನಹಳ್ಳಿಯ ಸುತ್ತ ಮುತ್ತಲಿನ ರೈತರು ಆಲೂಗಡ್ಡೆಯನ್ನು ಹೊಲದಲ್ಲೇ ಶೇಖರಿಸುವ ಸರಳ ಉಪಾಯವನ್ನು ಬಹಳ ಹಿಂದೇ ಕಂಡುಕೊಂಡಿರುವರು. ಹೊಲದ ಎತ್ತರ ಪ್ರದೇಶದಲ್ಲಿ, ನೆಲಗಟ್ಟುಮಾಡಿ, 25 ಅಡಿ ಉದ್ದ 4 ಅಡಿ ಅಗಲಕ್ಕೆ ಪ್ರತಿ 4 ಅಡಿಗೆ ಎರಡೆರಡು ಕಲ್ಲುಕಂಬ ಹಾಕಿ ಚಪ್ಪರ ಹಾಕುವುದು. ಚಪ್ಪರಕ್ಕೆ ನೀಲಗಿರಿ ತೊಲೆಗಳನ್ನು ಹಾಕಿ, ತೆಂಗಿನ ಗರಿ, ಹೊಂಗೆಸೊಪ್ಪು ಹೊದಿಸಿ, ಮರೆ ಮಾಡುವುದು. ಗಟ್ಟಿನೆಲದ ಮೇಲೆ ಕಾಶಿ ಹುಲ್ಲು ಅಥವಾ ಅಂಚಿ ಹುಲ್ಲು, ಕಬ್ಬಿನ ಗರಿಗಳನ್ನು ದಪ್ಪನಾಗಿ ಹೊದೆಸುವುದು. ಅದರ ಮೇಲೆ ಅಗೆದು ತೆಗೆದ ಆಲೂಗಡ್ಡೆಯನ್ನು ತಂದು 3-5 ಅಡಿ ಎತ್ತರದಷ್ಟು ರಾಶಿ ಹಾಕಲಾಗುತ್ತದೆ. ಅದರ ಮೇಲೆ ಮತ್ತೆ 4 ಇಂಚಿನಷ್ಟು ದಪ್ಪವಾಗಿ ಈ ಮೇಲೆ ತಿಳಿಸಿದ ಸೊಪ್ಪು ಅಥವಾ ಆಲೂಗಡ್ಡೆಯ ಸೊಪ್ಪನ್ನೇ ಗಟ್ಟಿಯಾಗಿ ಹಾಕಿ ರಾಶಿಯನ್ನು ಮುಚ್ಚಲಾಗುತ್ತದೆ. ಎರಡು ಮೂರು ವಾರಗಳಿಗೊಮ್ಮೆ ಹುಳು ಬಿದ್ದಿದೆಯೆ ಎಂದು ನೋಡುತ್ತಿರಬೇಕು. ಈ ರೀತಿ ಆಲೂಗಡ್ಡೆಯನ್ನು 2-3 ತಿಂಗಳು ಶೇಖರಿಸಿಡಲು ಸಾಧ್ಯ. ಆಲೂಗಡ್ಡೆಗೆ ಇಲಿ, ಹೆಗ್ಗಣಗಳ ಕಾಟ ತಪ್ಪಿಸಲು ರೈತರು ಕಂಡುಕೊಂಡ ಸರಳ ಅಷ್ಟೇ ಪರಿಣಾಮಕಾರಿ ಕ್ರಮ ಎಂದರೆ ರಾಶಿಯ ಸುತ್ತಲೂ ಎಕ್ಕದ ಗಿಡ, ಎಲೆಗಳನ್ನು ಹಾಕುವುದು. ಇದರಿಂದ ಹತ್ತಿರ ಬಂದ ಮೂಷಕಗಳು ಎಕ್ಕದ ಘಾಟಿಗೆ ಹೆದರಿ, ಆಲೂಗಡ್ಡೆ ಆಸೆ ಬಿಟ್ಟು ಪರಾರಿಯಾಗುವುವಂತೆ.

ಈ ರೀತಿಯ ಎರಡು ಚಪ್ಪರಗಳು ಒಂದು ಎಕರೆಯಲ್ಲಿ ಬೆಳೆಯುವ ಆಲೂಗಡ್ಡೆಯನ್ನು ಶೇಖರಿಸಲು ಸಾಕಂತೆ. ಪ್ರತಿ ಚಪ್ಪರಕ್ಕೆ 12 ಕಲ್ಲುಕಂಬ ಬೇಕಾಗುತ್ತದೆ. ಚಪ್ಪರ ಹಾಕಲು, ಸೊಪ್ಪು, ಹುಲ್ಲು ತಂದು ಹೊದಿಸಲು ಒಟ್ಟಾರೆ 7 ರಿಂದ ಹತ್ತು ಆಳುಗಳು ಬೇಕಾಗುತ್ತದೆ ಮಧ್ಯಾಹ್ನದ ಸುಡು ಬಿಸಿಲಿನಲ್ಲೂ, ಈ ರಾಶಿಯ ಒಳಗೆ ಕೈಹಾಕಿ ತಡವಿದರೆ, ತಂಪಾದ ಶೈತ್ಯಾಗಾರದಲ್ಲಿ ಆಲೂಗಡ್ಡೆಗಳು ನಿದ್ರಿಸುತ್ತಿರುವುದು ತಿಳಿಯುತ್ತದೆ.

ಮಾಹಿತಿ : ಸುಬ್ಬಯ್ಯ, ಬೆಂಡಿಗಾನಹಳ್ಳಿ,
ಹೊಸಕೋಟೆ (ತಾ),
ಸಂಗ್ರಹ : ಟಿ.ಎನ್. ಪ್ರಕಾಶ್

ಆಗಂತುಕರಾಗಿ ಭಾರತಕ್ಕೆ ಬಂದ ಪೀಡೆಗಳು

ಯಾವುದು	ಎಲ್ಲಿಂದ	ಯಾವಾಗ
ಕಾಫೀ ತುಕ್ಕು ರೋಗ	ಶ್ರೀಲಂಕಾ	1879
ಗೋದಿಯಲ್ಲಿ ಕಾಡಿಗೆ ರೋಗ	ಆಸ್ಟೇಲಿಯಾ	1906
ರಬ್ಬರಿನ ಬೂದಿ ರೋಗ	ಮಲೇಷಿಯಾ	1938
ಸೇಬಿನ ಕಜ್ಜಿ	ಆಸ್ಟ್ರೇಲಿಯಾ	1943

ಇಟ್ಟರೇ ಸೆಗಣಿಯಾದೆ .... ಔಷಧಿಯೂ ಆದೆ !

ಹೌದು ! ಸೆಗಣಿ-ಬೆರಣಿ-ವಿಭೂತಿ-ಗೊಬ್ಬರ-ಔಷಧಿ ಇನ್ನೂ ಏನೆಲ್ಲಾ ಆಗಬಹುದೆಂದು ಪ್ರಯತ್ನಿಸಿ ನೋಡಿದ್ದಾರೆ ತೀರ್ಥಹಳ್ಳಿ ತಾಲ್ಲೂಕಿನ ಬಸವನಗದ್ದೆಯ ರವಿ. ಅಡಿಕೆ ಸಸಿಗಳನ್ನು ಬೆಳೆಸುವಾಗ, ಎಳೆಯ ಸಸಿಗೆ ಚುಕ್ಕೆ ರೋಗ ಬರುವುದು, ಎಲೆಯ ಮಧ್ಯದಲ್ಲಿ ಒಣಗಿ ಹೋಗುವುದು, ಸಣ್ಣಹುಳುಗಳು, ಕ್ರಿಮಿಗಳು ಕಂಡುಬರುವುದು ಇವುಗಳನ್ನೆಲ್ಲಾ ತಡೆಯುವುದು ಹೇಗೆಂದು ಯೋಚಿಸಿದ ರವಿಗೆ ಕಂಡದ್ದು ಸೆಗಣಿ. ಹಸಿ ಸೆಗಣಿಯನ್ನು ತೆಳುವಾಗಿ ನೀರಿನಲ್ಲಿ ಕರಡಿ ವಾರಕ್ಕೆ ಒಂದೆರಡು ಬಾರಿ ಅಡಿಕೆ ಸಸಿಗಳ ಮೇಲೆ ಸಿಂಪರಿಸಿದಾಗ ಕ್ರಿಮಿಗಳ ಹತೋಟಿಯಾಯಿತು ಅನ್ನುತ್ತಾರೆ.

ಅಷ್ಟೇ ಅಲ್ಲ, ಹಿತ್ತಲಿನಲ್ಲಿ ಬೆಳೆದ ಚೀನಿಕಾಯಿ, ಕುಂಬಳ ಕಾಯಿ ನಾಳೆ ಅಡುಗೆಗೆ ರೆಡಿ ಎನ್ನುವಷ್ಟರಲ್ಲೇ ಮಂಗ ಮಾಯವಾದರೆ ? ಮಂಗಗಳಿಂದ ಹೇಗಪ್ಪ ಕಾಪಾಡುವುದು ? ಅದಕ್ಕೂ ರವಿ ಉಪಯೋಗಿಸಿದ್ದು ಸೆಗಣಿ. ಸೆಗಣಿ ಕದಡಿ ಕಾಯಿಯ ಮೇಲೆಲ್ಲಾ ಹಚ್ಚಿಟ್ಟರೆ ಮಂಗ ತಿನ್ನುವುದಿಲ್ಲವಂತೆ ; ಮಂಗದ ಕಾಟದಿಂದ ಕಾಯಿಗಳು ಪಾರು. ಇಂಗು ತಿಂದ .... ಅಲ್ಲಲ್ಲಾ .... ಸೆಗಣಿ ತಿಂದ ಮಂಗ ! ಎನ್ನುತ್ತಾರೆ ಬಸವನಗದ್ದೆಯ ರವಿ.

ಸಂಗ್ರಹ : ತೇಜಸ್ವಿನಿ

ಗಿಡ ಸೊರಗುತ್ತಿದೆಯೇ ?

ಬ್ಯಾಕ್ಟೀರಿಯವೋ, ಬೂಸ್ಟೋ ಒಟ್ಟಾರೆ ಗಿಡ ಸೊರಗುವ ಕಾಯಿಲೆ ತಡೆಯಲು ಉತ್ತರ ಪ್ರದೇಶದ ರೈತರು ಅನೇಕ ದಾರಿ ಹುಡುಕಿದ್ದಾರೆ.

★ ಕಡಲೆ ಕಾಳಿನ ಗಿಡಗಳ ಜೊತೆಯಲ್ಲಿ ಬಾರ್ಲಿಯನ್ನು ಬೆಳೆಸುವುದರಿಂದ ಕಡಲೆ ಗಿಡ ಸೊರಗುವುದನ್ನು ತಡೆಯ ಬಹುದಂತೆ.

★ ಅದೇ ರೀತಿ ತೊಗರಿಗಿಡಗಳ ನಡುವೆ ಜೋಳ ಬೆಳೆಸುವುದರಿಂದ ತೊಗರಿ ಗಿಡಗಳು ಸೊರಗುವುದನ್ನು ತಪ್ಪಿಸಬಹುದಂತೆ.

ಬೀಜೋಪಚಾರದ ವಿಧಿವಿಧಾನಗಳಿಂದ ಗಿಡ ಸೊರಗುವ ಕಾಯಿಲೆಯನ್ನು ನಿಯಂತ್ರಣದಲ್ಲಿಡಲು ಸಾಧ್ಯ ಎನ್ನುತ್ತಾರೆ ಉತ್ತರ ಪ್ರದೇಶದ ರೈತರು. ಒಂದು ಕೆ.ಜಿ. ಕಡಲೆಕಾಳಿಗೆ ಒಂದು ಗ್ರಾಂ. ಇಂಗು ಅಥವಾ 2.5 ಗ್ರಾಂ ನಷ್ಟು ಸಾಸಿವೆ ಎಣ್ಣೆಯಿಂದ ಬೀಜೋಪಚಾರ ಮಾಡಿ ಬಿತ್ತಿದರೆ ಗಿಡಸೊರಗುವ ಕಾಯಿಲೆಯಿಂದ ಮುಕ್ತಗೊಳಿಸಬಹುದಂತೆ.


ಸಂಗ್ರಹ : ಎಸ್.ಕೆ. ಪ್ರಧಾನ್
ಮೂಲ : ಹನೀಬೀ 10 (1) 1999

ಬಿದಿರು ಕೂಡಾ ಔಷಧಿ !

ಕಳಲೆ ಎಂದು ಕರೆಯಲ್ಪಡುವ ಎಳೆಯ ಬಿದಿರು ಕೂಡಾ ಭತ್ತಕ್ಕೆ ಬೀಳುವ ಕಂದು ಜಿಗಿ ಹುಳು ನಿಯಂತ್ರಿಸುವ ಔಷಧಿಯಾಗಬಲ್ಲದು ಎನ್ನುತ್ತಾರೆ ಬಿಹಾರ ರಾಜ್ಯದ ರೈತ ಅರ್ಜುನ ಪ್ರಸಾದ್.

ಎಳೆಯ ಬಿದಿರು ಗಿಡಗಳನ್ನು ಕಿತ್ತು ಅದರ ಮೇಲ್ಪದರಗಳನ್ನು ಬಿಡಿಸಿ, ಒಳಗಿನ ನಡು ಭಾಗದ ಬಿದಿರನ್ನು ಒಂದೊಂದು ಇಂಚಿನ ತುಂಡುಗಳನ್ನಾಗಿ ಕತ್ತರಿಸಿ ನೀರಿನಲ್ಲಿ ಮುಳುಗಿಸಿಡುತ್ತಾರೆ. ಬಿದಿರಿನ ತುಂಡುಗಳ ಪ್ರಮಾಣದ ಎರಡರಷ್ಟು ನೀರನ್ನು ಹಾಕಿ ಒಂದು ಮಣ್ಣಿನ ಮಡಕೆಯಲ್ಲಿ ಸುಮಾರು 4-5 ದಿನಗಳ ಕಾಲ ನೆನಸಿಡುತ್ತಾರೆ. ಅನಂತರ ಈ ನೀರನ್ನು ಬಸಿದು ಔಷಧಿಯಂತೆ ಭತ್ತದ ಗಿಡಗಳ ಮೇಲೆ ಸಿಂಪಡಿಸುತ್ತಾರೆ. 30 ಎಕರೆ ಭತ್ತದ ಗದ್ದೆಗೆ ಸುಮಾರು ಹತ್ತು ಲೀಟರಿನಷ್ಟು ದ್ರಾವಣ ಬೇಕಾಗುತ್ತದೆ. ಬಿದಿರು ನೆನಸಿಟ್ಟ ಈ ದ್ರಾವಣ ಕಂದು ಜಿಗಿ ಹುಳು ನಿಯಂತ್ರಿಸುವುದರಲ್ಲಿ ಯಶಸ್ವಿ ಎನ್ನುತ್ತಾರೆ ಬಿಹಾರದ ರೈತರು.

ಸಂಗ್ರಹ : ಎ. ರವೀಂದ್ರ
ಮೂಲ : ಹನೀಬೀ (1) 1999.



ಆಡಿನ ಹಾಲು ಔಷಧಿಯೇ ?

ಹೌದೆನ್ನುತ್ತಾರೆ ಗುಜರಾತಿನ ಮಾನಭಾಯಿ ನಾತುಭಾಯಿ ಅಗೋರಿ. ಹಸಿಮೆಣಸಿನಕಾಯಿ, ಕಾಳುಮೆಣಸು, ಬದನೆ ಇವುಗಳಿಗೆ ಬರುವ ಎಲೆ ಮುದುಡುವ ರೋಗ, ಹೂ ಉದುರುವುದು ಇವೆಲ್ಲವನ್ನೂ ತಪ್ಪಿಸಲು ಆಡಿನ ಹಾಲೇ ಸರಿಯಾದ ಔಷಧಿ ಎನ್ನುತ್ತದೆ ಅವರ ಅನುಭವ. ಔಷಧಿ ಸಿಂಪರಣೆ ಮಾಡುವ ಯಂತ್ರ ಉಪಯೋಗಿಸಿ ಆಡಿನ ಹಾಲನ್ನು ಗಿಡಗಳ ಮೇಲೆ ಸಿಂಪಡಿಸುವದರಿಂದ ಒಂದೇ ವಾರದಲ್ಲಿ ಕಾಯಿಲೆ ಹತೋಟಿಗೆ ಬರುತ್ತದೆ ಎನ್ನುತ್ತಾರೆ ಅವರು.

ಮೂಲ : ಎಸ್.ಕೆ. ಪ್ರಧಾನ್
ಹನೀಬೀ 10 (1) 1999

ಎಲೆಕೋಸಿನಲ್ಲಿ ಹುಳು

ಹಸಿರು ಬಣ್ಣದ ಸಣ್ಣ ಕಂಬಳಿ ಹುಳುಗಳು (*Heliothis armigera*) ಎಲೆಕೋಸನ್ನು ತಿಂದು ರೈತರಿಗೆ ಕಾಟ ಕೊಡುತ್ತವೆ.

ಗುಜರಾತಿನ ಭಾಗವನ್‌ಭಾಯಿ ಅಂಬಾಬಾಯಿ ಗೋರಿಯವರು ಕತ್ತಾಳೆ (*Agave americana*) ಮತ್ತು ಮೆಣಸಿನಕಾಯಿ ಉಪಯೋಗಿಸಿ ಈ ಕ್ಯಾಬೇಜಿನ ಹುಳುಗಳನ್ನು ನಾಶಪಡಿಸುತ್ತಾರೆ. ಕತ್ತಾಳೆ ಎಲೆಯನ್ನು ಕಲ್ಲಿನ ಮೇಲೆ ಚೆನ್ನಾಗಿ ಜಜ್ಜಿ, ಹಿಂಡಿ ರಸ ತೆಗೆಯುತ್ತಾರೆ. ಈ ರಸಕ್ಕೆ ಒಂದು ಮುಷ್ಟಿಯಷ್ಟು ಕೆಂಪು ಒಣಗಿದ ಮೆಣಸಿನಕಾಯಿಯ ಪುಡಿಯನ್ನು ಸೇರಿಸಿ ಕಲಿಸುತ್ತಾರೆ. ಪೇಸ್ಟ್‌ನಂತಹ ಈ ಮಿಶ್ರಣಕ್ಕೆ ಸುಮಾರು 14 ಲೀ. ನಷ್ಟು ನೀರು ಸೇರಿಸಿ ದ್ರಾವಣ ತಯಾರಿಸಿ ಔಷಧಿ ಸಿಂಪರಣೆಯ ಯಂತ್ರಗಳಿಂದ ತೋಟದ ಕ್ಯಾಬೇಜ್ ಬೆಳೆಯ ಮೇಲೆಲ್ಲಾ ಸಿಂಪಡಿಸುತ್ತಾರೆ. ಕಳೆದ 7 ವರ್ಷಗಳ ಅವರ ಅನುಭವದ ಪ್ರಕಾರ ಈ ವಿಧಾನದಿಂದ ಕಂಬಳಿಹುಳುಗಳನ್ನು ಯಶಸ್ವಿಯಾಗಿ ನಿಯಂತ್ರಿಸಲು ಸಾಧ್ಯ ಎನ್ನುತ್ತಾರೆ ಭಾಗವನ್‌ಭಾಯಿ.

ಮೂಲ : ಹನೀಬೀ 10 (1) 1999



ಹತ್ತಿಗೆ ಹೊಗೆಸೊಪ್ಪಿನ ಉಪಚಾರ !

ಹತ್ತಿಗಿಡದಲ್ಲಿ ಹೂ ಉದುರುವುದು. ಇಳುವರಿ ಕಡಿಮೆ ಆಗುವುದು ಇದನ್ನು ತಪ್ಪಿಸುವುದು ಹೊಗೆಸೊಪ್ಪಿನಿಂದ ಸಾಧ್ಯ ಎನ್ನುತ್ತಾರೆ ತಮಿಳುನಾಡಿನ ಎ.ಆರ್. ರಾಮರಾಜ್.


ಒಂದು ಕೆ.ಜಿ. ಹೊಗೆಸೊಪ್ಪನ್ನು ಪುಡಿ ಮಾಡಿ, ಮೂರು ಲೀಟರ್ ನೀರಿನಲ್ಲಿ ಕದಡಿ ಮೂರುದಿನಗಳ ಕಾಲ ಮಡಿಕೆಯಲ್ಲಿ ಕೊಳೆಯಲು ಬಿಡುತ್ತಾರಂತೆ. ಅನಂತರ ಅದನ್ನು ಬಸಿದು 500 ಮಿ.ಲಿ. ಬೇವಿನೆಣ್ಣೆ ಹಾಗೂ ಅದು ಸರಿಯಾಗಿ ಮಿಶ್ರವಾಗಲು ಸ್ವಲ್ಪ ಸೋಪು ಎಲ್ಲವನ್ನೂ ಒಟ್ಟು ಸೇರಿಸಿ, ನೀರು ಬೆರೆಸಿ ತೆಳುಮಾಡಿದ ದ್ರಾವಣವನ್ನು ಹತ್ತಿಗಿಡದ ಮೇಲೆ ಸಿಂಪಡಿಸುತ್ತಾರಂತೆ. ಒಂದೇ

ವಾರದಲ್ಲಿ ಹೂ ಉದುರುವುದು ಕಡಿಮೆಯಾಗುವುದರ ಜೊತೆಗೆ ಕಾಯಿಕೊರಕ (Boll worm) ಕಾಟವೂ ಕಡಿಮೆಯಾಗಿ ಒಟ್ಟಾರೆ ಹತ್ತಿ ಇಳುವರಿ ಹೆಚ್ಚುವುದು ನಿಶ್ಚಿತವಂತೆ.

ರಾಸಾಯನಿಕಗಳೇಕೆ ಸೊಪ್ಪುಸದೆಗಳೇ ಔಷಧಿ !

ತಮಿಳುನಾಡಿನ ಚಿನ್ನಕುರುಸ್ವಾಮಿಯ ಪ್ರಕಾರ ಭತ್ತದ ಗದ್ದೆಯ ಕೀಟಗಳ ನಾಶಕ್ಕೆ ರಾಸಾಯನಿಕ ಔಷಧಿಗಳು ಬೇಕೇ ಇಲ್ಲ. ಬೇರೆ ಬೇರೆ ಗಿಡಗಳ ಎಲೆಗಳೇ ಸಾಕು ಔಷಧಿಯಂತೆ ಬಳಸಲು. ಅರ್ಧ ಕೆ.ಜಿ. ಯಷ್ಟು ಒಣಗಿದ ಹೊಗೆಸೊಪ್ಪಿನ ಎಲೆಗಳು, ಒಂದು ಕೆ.ಜಿ. ಬೇವಿನ ಬೀಜ, ಜೊತೆಗೆ ಕಣಗಲದ ಬೀಜ ಅರ್ಧ ಕೆ.ಜಿ., ದತ್ತೂರ ಅಥವಾ ಉಮ್ಮತ್ತಿಯ ಎಲೆಗಳು ಅರ್ಧ ಕೆ.ಜಿ. ಎಲ್ಲವನ್ನೂ ಒಟ್ಟು ಮಾಡಿ ಪುಡಿ ಮಾಡಿ ಅರ್ಧ ಕೆ.ಜಿ. ಸುಣ್ಣವನ್ನು ಮಿಶ್ರ ಮಾಡಬೇಕು. ಈ ಎಲ್ಲಾ ಒಟ್ಟು ಸೇರಿದ ಮಿಶ್ರಣವನ್ನು ಸುಮಾರು 50ಲೀಟರ್ ನೀರಿನಲ್ಲಿ ಸುಮಾರು 15 ದಿನಗಳ ಕಾಲ ನೆನೆಸಿಡಬೇಕು. ಎರಡು ದಿನಕ್ಕೊಮ್ಮೆ ಈ ಮಿಶ್ರಣವನ್ನು ಕೋಲಿನಿಂದ ಕಲಿಸುತ್ತಿರಬೇಕು. 15 ದಿನಗಳ ನಂತರ ದ್ರಾವಣವನ್ನು ಬಸಿದು, ಒಂದು ಲೀಟರ್ ದ್ರಾವಣಕ್ಕೆ 15 ಲೀಟರ್ ನೀರು ಬೆರೆಸಿ ಭತ್ತದ ಗದ್ದೆಗೆ ಸಿಂಪಡಿಸಬೇಕು. ಈ ಮೇಲೆ ಹೇಳಿದ ಮಿಶ್ರಣಗಳ ಪ್ರಮಾಣ ಸುಮಾರು ಆರು ಎಕರೆ ಭತ್ತದ ಗದ್ದೆಗೆ ಸಿಂಪಡಿಸಲು ಸಾಕಾಗುತ್ತದೆ.

ಸಂಗ್ರಹ : ವಿವೇಕಾನಂದನ್
ಮೂಲ : ಹನೀಬೀ 10 (1) 1999



ಹಕ್ಕಿ ಓಡಿಸಲು ಹಲವಾರು ವಿಧಾನ


ರಾಜಸ್ಥಾನದ ಜನರು ಹಕ್ಕಿ ಓಡಿಸಲು ಅನೇಕ ವಿಧಾನಗಳನ್ನು ಹುಡುಕಿ ಕೊಂಡಿದ್ದಾರೆ.

1) ರಾಜಸ್ಥಾನದ ಭಿಲ್ಲ ಜನಾಂಗದ ಜನ ಬೆರ್ಚಪ್ಪನ ಕೈಗೊಂದು ಬಿಲ್ಲು ಬಾಣ ಕೊಡುತ್ತಾರೆ. ಅದೇ ಜನಾಂಗದ ಜನರ ಇನ್ನೊಂದು ಪದ್ಧತಿಯೆಂದರೆ ಎತ್ತರವಾದ ಮರದ ತುದಿಗೆ ಬಾವುಟ ಕಟ್ಟುವುದು. ಇದೂ ಕೂಡ ಹಕ್ಕಿಗಳನ್ನು ಓಡಿಸಿ, ಬೆಳೆ ಸಂರಕ್ಷಿಸಲು ನೆರವಾಗುತ್ತದೆ.

2) ಅದೇ ರೀತಿ ಹಕ್ಕಿ ಓಡಿಸಲು ರಾಜಸ್ಥಾನದ ಜನರು ಬಳಸುವ ಇನ್ನೊಂದು ವಿಧಾನ ಬಹು ಸರಳ. ಒಣಗಿದ ತೇಗ, ಮುತ್ತುಗದ ಎಲೆಗಳನ್ನು ದಾರದಲ್ಲಿ ಕಟ್ಟಿ ಮಾಲೆ ಮಾಡುತ್ತಾರೆ. ಈ ಮಾಲೆಯ ಮಧ್ಯಕ್ಕೆ ದಾರ ಕಟ್ಟಿ ಹಕ್ಕಿ ಕಾಯಲು ಮಂಚದ ಮೇಲೆ ಕುಳಿತ ವ್ಯಕ್ತಿ ದಾರ ಎಳೆಯುತ್ತಿರುತ್ತಾನೆ. ಒಣಗಿದ ಎಲೆಗಳ ಶಬ್ದಕ್ಕೆ ಹೆದರಿ ಹಕ್ಕಿಗಳು ಹಾರಿ ಹೋಗುತ್ತವೆ. ಕೆಲವೊಮ್ಮೆ ಎಲೆಗಳ ಬದಲು ಗಂಟೆಗಳನ್ನು ಕಟ್ಟುವುದೂ ಉಂಟು.

3) ಮಣ್ಣಿನ ಮಡಿಕೆಯ ಬಾಯಿಗೆ ರಂಧ್ರವಿರುವ ಕುರಿಯ ಚರ್ಮವನ್ನು ಬಿಗಿಯಾಗಿ ಎಳೆದು ಕಟ್ಟುತ್ತಾರೆ. ರಂಧ್ರದೊಳಗೆ ಹಕ್ಕಿಯ ಪುಕ್ಕದ ತುದಿಯನ್ನು ಚರ್ಮದೊಳಗೆ ಸೇರಿಸಿ, ಒಂದು ತುದಿಯನ್ನು ಗಂಟುಹಾಕಿ ಮೊದಲೇ ಸಿದ್ಧಗೊಳಿಸಿರುತ್ತಾರೆ. ಕಾಲುಗಳ ಮಧ್ಯೆ ಮಡಿಕೆಯನ್ನಿರಿಸಿಕೊಂಡು, ಪುಕ್ಕವನ್ನು ಎಳೆದಾಗ ಹೊರಡುವ ಶಬ್ದಕ್ಕೆ ಹಕ್ಕಿಗಳು ಹಾರಿ ಹೋಗುತ್ತವಂತೆ.

ಸಂಗ್ರಹ : ಸತೀಶ್ ಕುಮಾರ್ ಶರ್ಮ
ಮೂಲ : ಹನೀಬೀ 10 (1) 1999



ಹಿತ್ತಲಗಿಡಕ್ಕೆ ಮಾಹಿತಿ

ಹಿತ್ತಲಗಿಡಕ್ಕೆ ಸೂಕ್ತ ಎನಿಸಿದ ವ್ಯಕ್ತಿಗಳು, ವಿಚಾರ, ಪದ್ಧತಿ, ಗಾದೆ, ಲಾವಣಿ, ಕತೆಗಳನ್ನು ಬರೆದು ಕಳುಹಿಸಿರಿ. ಸೂಕ್ತ ಮಾಹಿತಿಗಳಿಗೆ ಪ್ರೋತ್ಸಾಹಕರ ಬಹುಮಾನವಿರುತ್ತದೆ.

ಸಂ.

ಹೀಗೊಂದು ಬಹುಬೆಳೆಯ ಬೇಸಾಯ ಕ್ರಮ

ಮುಂಗಾರಿನಲ್ಲಿ (ಮೇ ತಿಂಗಳು) ಹೆಸರು ಬಿತ್ತನೆ ಮಾಡಿ. ಆಗಸ್ಟ್ ತಿಂಗಳೊಳಗೆ ಹೆಸರು ಕಾಯಿಗಳು ಸಿದ್ಧವಾಗುತ್ತವೆ. ಈ ಕಾಯಿಗಳನ್ನು ಮಾತ್ರ ಬಿಡಿಸಿ ತೆಗೆದು ಗಿಡವನ್ನು ಮತ್ತೆ ಮಣ್ಣಿಗೆ ಸೇರಿಸಿ.

ಸಪ್ಟಂಬರ್‌ನಲ್ಲಿ ರಾಗಿ ಬಿತ್ತನೆ ಮಾಡಿ. ರಾಗಿಯ ಜೊತೆ ಅಕ್ಕಡಿ ಸಾಲಿನಲ್ಲಿ ಅವರೆ, ಸಾಸಿವೆ, ಹುರುಳಿ, ಹುಚ್ಚೆಳ್ಳು, ಜೋಳವನ್ನು ಕೂಡಾ ಬಿತ್ತನೆ ಮಾಡಿದರೆ ಅನೇಕ ರೀತಿಯ ಲಾಭ. ಹುಚ್ಚೆಳ್ಳು ಅನೇಕ ಕೀಟಗಳನ್ನು ತಡೆಗಟ್ಟುತ್ತದೆ. ಸಾಸಿವೆ ಗಿಡಗಳಿಂದಾಗಿ ಎಲೆ ತಿನ್ನುವ ಕೀಟಗಳು ಹತೋಟಿಗೆ ಬರುತ್ತವೆ. ಇನ್ನು ಅವರೆ, ಹುರುಳಿಗಳಿಂದ ಸಾರಜನಕ ಬೇರುಗಳಲ್ಲಿ ಸಂಗ್ರಹವಾಗಿ ಭೂಮಿಯ ಫಲವತ್ತತೆ ಹೆಚ್ಚುತ್ತದೆ. ಜೋಳ, ಹಕ್ಕಿ - ಪಕ್ಕಿಗಳು ಕೂರಲು ನೆರವಾಗಿ, ಈ ಹಕ್ಕಿಗಳು ಕೀಟಗಳನ್ನು ಹಿಡಿದು ತಿಂದು ಪರೋಕ್ಷವಾಗಿ ಕೀಟ ಹತೋಟಿಗೆ ನೆರವಾಗುತ್ತದೆ.

ಒಟ್ಟಾರೆ ಈ ಬೇಸಾಯ ಪದ್ಧತಿಯಿಂದ ಮಣ್ಣಿನ ಆರೋಗ್ಯ ಉತ್ತಮಗೊಂಡು ಸಾವಯವ ರೀತಿಯಲ್ಲಿ ವಾರ್ಷಿಕ ಬೆಳೆಗಳನ್ನು ತೆಗೆಯಲು ನೆರವಾಗುತ್ತದೆ.

ಮಾಹಿತಿ : ಬಿ. ಬಸವರಾಜು, ಸಂತೇಶಿವರ.

ಎರೆಹುಳು ಗೊಬ್ಬರ ತಯಾರಿಕೆಗೆ ಕೆಂಪು ಇರುವೆ ಕಾಟ

ಎರೆ ಹುಳು ಗೊಬ್ಬರ ತಯಾರಿಸುವಾಗ ಕೆಂಪು ಇರುವೆಗಳು ಎರೆಹುಳಕ್ಕೆ ಮುತ್ತಿಗೆ ಹಾಕಿ ಕಚ್ಚಿ ತಿಂದು ಬಿಡುವ ಸಂದರ್ಭಗಳಿವೆ. ಈ ಕೆಂಪು ಇರುವೆ ಕಾಟ ತಪ್ಪಿಸಲು ಹೀಗೊಂದು ಉಪಾಯ ಹುಡುಕಿದ್ದಾರೆ ಬೈಫ್‌ಸಿಬ್ಬಂದಿಗಳು. ಮಣ್ಣಿನಿಂದ ತೊಟ್ಟಿ ಕಟ್ಟಿ, ಅದರೊಳಗೆ ಸೊಪ್ಪು ಮತ್ತು ಸೆಗಣಿ ಹಾಕಿ ಕೊಳೆಯಲು ಬಿಡುವ ಮೊದಲು ತೊಟ್ಟಿಯನ್ನು ಸೆಗಣಿಯಿಂದ ಸಾರಿಸುವುದು ಒಳ್ಳೆಯದು. ಹೀಗೆ ಬರೀ ಸೆಗಣಿಯಿಂದ ಸಾರಿಸುವ ಬದಲು ಸೆಗಣಿಗೆ ಸ್ವಲ್ಪ ಅರಿಶಿಣ ಮತ್ತು ಬೇವಿನ ಹಿಂಡಿ ಬೆರೆಸಿ ಸಾರಿಸಿದರೆ ಕೆಂಪು ಇರುವೆ ಹತ್ತಿರವೂ ಸುಳಿಯದು. ಬೇವಿನ ಹಿಂಡಿಯ ಬದಲು ಇನ್ನಾವುದೇ ಕಹಿ ಪದಾರ್ಥಗಳನ್ನು ಬೇಕಾದರೂ ಬಳಸಬಹುದು. ಬೈಫ್‌ನ ಈ ಪದ್ಧತಿ ಅನುಸರಿಸಿದ ತಳಿಯಲ್ಲಿನ ಗ್ರೀನ್ ಫೌಂಡೇಷನ್ ಸಂಸ್ಥೆಗೆ ಕೂಡಾ ಈ ಪದ್ಧತಿ ಅತ್ಯುತ್ತಮ ಎನ್ನಿಸಿದೆಯಂತೆ.

ಸಂಗ್ರಹ : ರೇಖಾ ಶರ್ಮ, ದಾಸನಕೊಪ್ಪ, ಶಿರಸಿ

~ • ~

ಮಹಾರಾಷ್ಟ್ರೀಯರಿಂದ ಕೆಲವು ಕಿವಿ ಮಾತುಗಳು

ಡಾ. ಬಿ. ರಾಹೂದ್‌ಕರ್

ಮಹಾರಾಷ್ಟ್ರದ ಜನರ ಅನುಭವಗಳನ್ನು ಆಧಾರಿತವಾದ "ವನಸ್ಪತಿ ಸಂವರ್ಧನ ಶಿಕ್ಷಣ" ಎಂಬ ಪುಸ್ತಕವನ್ನು 1911 ರಲ್ಲಿ ಮಹಾಜನ್ ಎನ್ನುವವರು ಪ್ರಕಟಿಸಿದ್ದರು. ಅದರಿಂದ ಆಯ್ದ ಕೆಲವು ಕಿವಿಮಾತುಗಳು ಕೆಳಗಿವೆ.

ಗಾಳಿಯ ದಿಕ್ಕು

ಗಾಳಿ ಬೀಸುವ ದಿಕ್ಕು ನಿಮ್ಮ ಬೆಳೆಯ ಮೇಲೆ ಪ್ರಭಾವ ಬೀರುವುದೆಂಬುದು ಗೊತ್ತೇ? ಪಶ್ಚಿಮದಿಂದ ಬೀಸುವ ಗಾಳಿ ನಿಮ್ಮ ಬೆಳೆಗೆ ಹಾನಿಕಾರಕ. ಅದರ ಬದಲು ಪೂರ್ವ ಅಥವಾ ಉತ್ತರದಿಂದ ಬೀಸುವ ಗಾಳಿ ಬೆಳೆಗೆ ಒಳ್ಳೆಯದು. ಹಾಗಾಗಿ ಭೂಮಿಯನ್ನು ಕೊಳ್ಳುವಾಗ ಭೂಮಿಯ ಪಶ್ಚಿಮದಿಕ್ಕಿಗೆ ಎತ್ತರ ಪ್ರದೇಶ ಅಥವಾ ಬೆಟ್ಟಗಳಿದ್ದರೆ ಒಳ್ಳೆಯದು. ಅಥವಾ ಭೂಮಿಯ ಪಶ್ಚಿಮ ದಿಕ್ಕಿನಲ್ಲಿ ಮರಗಳನ್ನು ನೆಟ್ಟು ಬೀಸುವ ಗಾಳಿಯನ್ನು ತಡೆಯುವುದು ಸೂಕ್ತ.



ಮಳೆಯ ಮುನ್ಸೂಚನೆ

ಮಿಂಚುಹುಳುಗಳ ಹಾರಾಟ ಹೆಚ್ಚಾಗಿ ಕಂಡು ಬರುವುದು ಮಳೆಗಾಲದ ಆಗಮನದ ಮುನ್ಸೂಚನೆಯಂತೆ.

ನೀರಿನ ಸುಳಿವು

ಸುರಹೊನ್ನೆ ಅಥವಾ ಪುನ್ನಾಗ ಮರ (*Calophyllum inophyllum*), ಅತ್ತಿಮರ (*Ficus gliomerata*), ಅಥವಾ ನೇರಳೆ ಮರ (*Eugenia jambolana*) ಇರುವ ಜಾಗದಲ್ಲಿ, ಏಡಿಯ ವಾಸಸ್ಥಳದ ಬಳಿ ಬಾವಿ ತೆಗೆದರೆ ನೀರು ಸಿಗುವ ಅವಕಾಶ ಹೆಚ್ಚು. ಜಮೀನಿನ ತಗ್ಗು ಪ್ರದೇಶದಲ್ಲಿ 6 ಅಡಿ ಉದ್ದ, 1 ಅಡಿ ಅಗಲ, ಒಂದೂವರೆ ಅಡಿ ಆಳದ ಗುಂಡಿ ತೆಗೆದು ಶಾಂತವಾದ ರಾತ್ರಿ ಹೊತ್ತಿನಲ್ಲಿ ಮಲಗಿ ಭೂಮಿಗೆ ಕಿವಿಗೊಟ್ಟು ಆಲಿಸಿದರೆ ನೀರು ಹರಿಯುವ ದಿಕ್ಕು ಹಾಗೂ ನೀರಿನ ಪ್ರಮಾಣ ತಿಳಿಯುತ್ತದೆ. ಅದರ ಆಧಾರದಿಂದ ಜಮೀನಿನಲ್ಲಿ ಬಾವಿ ತೆಗೆಸುವ ನಿರ್ಧಾರ ಕೈಗೊಳ್ಳಬಹುದು.

ಮರಸೇಬು ಫಲ ನೀಡುತ್ತಿಲ್ಲವೆ?

ಮರ ಸೇಬಿನ (*Feronia limonia*) ಮರದ ಕಾಂಡದಲ್ಲಿ ಕೆಳಮುಖವಾಗಿ ತೂತು ಕೊರೆಯಬೇಕು. ಜೇನು ಮೇಣವನ್ನು ಒಂದು ಬಾಟಲಿಯ ರೂಪ ಮಾಡಿ ಅದರೊಳಗೆ ಸ್ವಲ್ಪ ಪಾದರಸವನ್ನು ತುಂಬಿಸಿ, ಇದನ್ನು ಕೊರೆದ ತೂತಿನೊಳಗಿಡಬೇಕು. ಅನಂತರ ತೂತನ್ನು ಜೇನು ಮೇಣದಿಂದ ಸಂಪೂರ್ಣವಾಗಿ ಮುಚ್ಚಬೇಕು. ಇದು ಮಹಾರಾಷ್ಟ್ರದ ಕೊಂಕಣ ಪ್ರಾಂತ್ಯದ ಪದ್ಧತಿ .

ದೇಶೀಯ ಜಾಣ್ಮೆ

ನರಿಗಳ ಕಾಟವೇ ?

ತೋಟ ಅಥವಾ ಗದ್ದೆಗಳ ಬದಿಗಳಲ್ಲಿ ಅಲ್ಲಲ್ಲಿ ನೇರಳೆ ಮರದ ಕೊಂಬೆಗಳನ್ನು ಹುಗಿದಿಟ್ಟರೆ, ತೋಟಕ್ಕೆ ನರಿಗಳ ಕಾಟ ತಪ್ಪುತ್ತದಂತೆ.



ಮಣ್ಣಿನ ಫಲವತ್ತತೆ

ಮಹಾರಾಷ್ಟ್ರದ ಕೊಂಕಣ ಪ್ರಾಂತ್ಯದಲ್ಲಿನ ರೈತರು ಬೇಸಿಗೆಯ ಅಂತ್ಯದಲ್ಲಿ ಹೊಲಗದ್ದೆಗಳ ಮೇಲಿನ ಕಳೆ, ಕಸಗಳನ್ನು ಒಟ್ಟು ಮಾಡಿ ಸುಡುತ್ತಾರೆ. ಹೀಗೆ ಮಾಡುವುದರಿಂದ ಮಣ್ಣಿನಲ್ಲಿ ಹುದುಗಿರುವ ಕೀಟಾಣುಗಳು ನಾಶಹೊಂದಿ, ಮಣ್ಣಿನ ರಚನೆ ಉತ್ತಮಗೊಂಡು, ಫಲವತ್ತತೆಯೂ ಹೆಚ್ಚುವುದೆಂದು ಅಲ್ಲಿನ ಜನರ ನಂಬಿಕೆ.

ಮೂಲ : ಹನೀಬೀ 9 (4) 1998

'ಹಿತ್ತಲಗಿಡ'ದ ಕುಟುಂಬ

Hony Bee	ಇಂಗ್ಲೀಷ್
Nam Vazhi Velanmai	ತಮಿಳು
Lokasarvani	ಗುಜರಾತಿ
Dzongkha Honey Bee	ಭೂತಾನಿ
Thenetiga	ತೆಲುಗು
Sujh Bujh	ಹಿಂದಿ
Khoj Bhal	ಪಂಜಾಬಿ

ಪುಣ್ಯಕೋಟಿ – ನಾಟಿ ಪಶು ಚಿಕಿತ್ಸೆ

ಮೂಗುದಾರ ಹಾಕಿ ಗಾಯವಾದರೆ

ದೊಡ್ಡಮರ (*Ailanthus excelsa*) ದ ತೊಗಟೆಯನ್ನು ಒಣಗಿಸಿ ಪುಡಿಮಾಡಿ ಮೇಕೆ ಮೂತ್ರದಲ್ಲಿ ಬೆರೆಸಿ ಮೂಗಿಗೆ ಸವರಬೇಕು. ಒಂದುವೇಳೆ ಗಾಯಕ್ಕೆ ಹುಳ ಬಿದ್ದಿದ್ದರೆ ಬೇವಿನ ಎಣ್ಣೆ ಮತ್ತು ಇಪ್ಪೆ (*Madhuca longifolia*) ಎಣ್ಣೆಯನ್ನು ಬೆರೆಸಿ ಲೇಪಿಸಬೇಕು.

ಮಾಹಿತಿ : ವೆಂಕಟರಮಣಯ್ಯ
ಸಂಗ್ರಹ : ಹೆಚ್.ಇ. ಭಾಗ್ಯ
9ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಹೇರಿಂದ್ಯಾಪನಹಳ್ಳಿ.

ಗರ್ಭ ನಿಲ್ಲಲು

ಕೆಲವು ಹಸುಗಳಿಗೆ ಗರ್ಭ ನಿಲ್ಲದಿರುವುದು ಸಮಸ್ಯೆ ಯಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಹೋರಿ ಕೂಡಿಸಿದ ತಕ್ಷಣ

ಅಮೃತ ಬಳ್ಳಿ	-	*Tinospora cordifolia*
ಕಕ್ಕೆಮರದ ತೊಗಟೆ	-	*Cassia fistula*
ಹಲಸಿನ ಚಿಗುರು	-	
ಚಿತ್ರಮೂಲದ ಬೇರು	-	*Plumbago zeylanica*
ವಿಷಂಧಾರಿ ಸೊಪ್ಪು	-	*Clerodendrum inerme*

ಇವೆಲ್ಲವನ್ನು ಸೇರಿಸಿ ಚೆನ್ನಾಗಿ ಕುಟ್ಟಿ ಮೊದಲಬಾರಿ ಕರುಹಾಕಿದ ಹಸುವಿನ ಹಾಲಿಗೆ ಹಾಕಿ ಸ್ವಲ್ಪ ಬೆಲ್ಲವನ್ನು ಸೇರಿಸಿ ಹೊಟ್ಟೆಗೆ ಕುಡಿಸಬೇಕು.

ಮಾಹಿತಿ : ಹೊನ್ನೇಗೌಡ, ನಾಗರಸನ ಕೋಟೆ
ಸಂಗ್ರಹ : ವೈ.ಎಂ. ಕೃಷ್ಣ, 10ನೇ ತರಗತಿ, ಕೃಷ್ಣಯ್ಯನ ದೊಡ್ಡಿ.

ಸಲೆ

ಲಕ್ಷಣಗಳು : ಜಾನುವಾರು ಜೊಲ್ಲು ಸುರಿಸುತ್ತದೆ, ಜ್ವರ ಬಂದಿರುತ್ತದೆ, ಮೇವುತಿನ್ನುವುದಿಲ್ಲ.

ಚಿಕಿತ್ಸೆ : 1) ಬೇವಿನ ಸೊಪ್ಪು (*Azadiracta indica*), ವೀಳ್ಯದೆಲೆ, ಬೆಲ್ಲ ಮತ್ತು ಇಂಗು ಬೆರೆಸಿ ಹೊಟ್ಟೆಗೆ ತಿನ್ನಿಸಿ. ಉಗುನಿ ಹಂಬನ್ನು (*Lettsomia thomsoni*) ಕುತ್ತಿಗೆಗೆ ಸುತ್ತಿ, 4 ದಿನಗಳು ಹೀಗೆ ಮಾಡಬೇಕು. 4ನೇ ದಿನದಿಂದ ಮೇವುತಿಂದರೆ 7ನೇ ದಿನದವರೆಗೂ ಸುಮಾರು ಬೆಚ್ಚಗಿನ ನೀರು ಕುಡಿಸಿ, ನಂತರ ತಣ್ಣೀರು ಕುಡಿಸಿ.

ಸಂಗ್ರಹ : ಜಯಕೃಪ, 9ನೇ ತರಗತಿ, ಸರ್ಕಾರಿ ಪ್ರೌಢ ಶಾಲೆ, ಮರಳವಾಡಿ.

2) ಇದಕ್ಕೆ ಬೇವಿನ ಸೊಪ್ಪು, ವೀಳ್ಯದೆಲೆ, ಮೆಣಸು, ಬೆಳ್ಳುಳ್ಳಿ, ಬೆಲ್ಲ ಇವುಗಳನ್ನು ಚೆನ್ನಾಗಿ ಅರೆದು ಬಿಸಿನೀರಿನಲ್ಲಿ ಹೊಟ್ಟೆಗೆ ಕುಡಿಸಬೇಕು.

ಸಂಗ್ರಹ : ಆಶಾ, 9ನೇ ತರಗತಿ, ದೊಡ್ಡಮರಳವಾಡಿ

ನೆರಡು ರೋಗ

ಲಕ್ಷಣಗಳು : ಹಸುವಿಗೆ ಉಸಿರಾಡಲು ತೊಂದರೆಯಾಗುತ್ತದೆ. ಕಿವಿಜೋಲುತ್ತದೆ, ಜೊಲ್ಲು ಸುರಿಯುತ್ತದೆ, ಕುತ್ತಿಗೆ ನರಗಳು ಹೊಡೆದುಕೊಳ್ಳುತ್ತವೆ. ಈ ಸಂದರ್ಭದಲ್ಲಿ ನೀರು ಕುಡಿಸಿದರೆ ತಕ್ಷಣ ಸಾವು ಬರುತ್ತದೆ.

ಚಿಕಿತ್ಸೆ : ಎಕ್ಕದ ಕುಡಿ - 3, ಎಕ್ಕದ ಮೊಗ್ಗು - 5, ಸಾಸಿವೆ, ಬೆಳ್ಳುಳ್ಳಿ, ಉಪ್ಪು ಇವೆಲ್ಲವನ್ನು ಸ್ವಲ್ಪ ಸ್ವಲ್ಪ ಸೇರಿಸಿ ನುಣ್ಣಗೆ ಅರೆದು ಜಾನುವಾರು ಸ್ವಲ್ಪ ಗೆಲುವಾಗಿದ್ದರೆ ವೀಳ್ಯದೆಲೆಯಲ್ಲಿ ಸೇರಿಸಿ ತಿನ್ನಿಸಿ. ಇಲ್ಲದಿದ್ದರೆ ಬಿಸಿ ನೀರಲ್ಲಿ ಬೆರೆಸಿ ಗೊಟ್ಟ (ಬಿದಿರಿನ ಕೊಳವೆ) ದಲ್ಲಿ ಕುಡಿಸಿ. 3 ರಿಂದ 4 ದಿವಸ ಹೀಗೆ ಮಾಡಿ.

ಮಾಹಿತಿ : ದೊಡ್ಡಲಿಂಗೇಗೌಡ, ಹೂಕುಂದ
ಸಂಗ್ರಹ : ಎಸ್.ಡಿ. ಪವಿತ್ರ, ಹೂಕುಂದ

ಗೆರೆಸಲು

ಪಶುವಿಗೆ ಮೊದಲು ಜ್ವರ ಕಾಣಿಸಿಕೊಳ್ಳುತ್ತದೆ. ಮೇವು ತಿನ್ನುವುದನ್ನು ನಿಲ್ಲಿಸುತ್ತದೆ. ಬಾಯಿಯಲ್ಲಿ ಯಥೇಚ್ಛವಾಗಿ ನೀರು ಸುರಿಸುತ್ತದೆ. ಕಾಲಿನ ಮಧ್ಯದಲ್ಲಿ ಗುಳ್ಳೆಗಳು ಕಾಣಿಸುತ್ತವೆ. ಈ ಗುಳ್ಳೆಗಳು ಒಡೆದ ಮೇಲೆ ವಾಸನೆ ಬಂದು ಹುಳು ಬೀಳುವುದುಂಟು. ಇದನ್ನು ನಿವಾರಿಸಲು ಪಶುಗಳಿಗೆ ರಾಗಿ ಗಂಜಿಯನ್ನು ಹೊಟ್ಟೆಗೆ ದಿನಕ್ಕೆರಡು ಬಾರಿಯಂತೆ ಕೊಡಬೇಕು. ಬಾಯಿಯಲ್ಲಿ ಹುಣ್ಣಾಗಿರುವುದರಿಂದ ಹುಣಸೆ ಹುಳಿಯಲ್ಲಿ ದಿನಕ್ಕೆರಡು ಸಲ ಬಾಯನ್ನು ತೊಳೆಯಬೇಕು. ಕಾಲಿನಲ್ಲಿ ಗಾಯವಾದರೆ ಹೊಂಗೆ ಎಣ್ಣೆ ಹಚ್ಚಬೇಕು.

ಸಂಗ್ರಹ : ಆಶಾ, 9ನೇ ತರಗತಿ, ದೊಡ್ಡ ಮರಳವಾಡಿ
ಮಾಹಿತಿ : ಶಿವಪ್ಪ ತೇರುಬೀದಿ.

ಎಮ್ಮೆ ಮತ್ತು ಹಸುವಿನ ಹೊಟ್ಟೆ ರೋಗ

ಈ ರೋಗ ಕಾಣಿಸಿಕೊಂಡಾಗ ಪಶುಗಳು ಮಂಕಾಗಿರುತ್ತವೆ.

ಕರಿಸಾಮೆ ಅಕ್ಕಿಯೊಡನೆ ಸಿಹಿ ಕುಂಬಳ ಕಾಯಿ ಹಾಕಿ ಅನ್ನಮಾಡಿ ಅದಕ್ಕೆ 10 ಗ್ರಾಂ ಲವಂಗ ಮತ್ತು 10 ಗ್ರಾಂ ಬಾಲ ಮೆಣಸನ್ನು ಹಾಕಿ ತಿನ್ನಿಸಬೇಕು. ಮೈಗೆ ಹರಳೆಣ್ಣೆ ಹಚ್ಚಿ, ತಾಮ್ರದ ತಂಬಿಗೆಗೆ ಬಿಸಿ ನೀರು ಹಾಕಿ ಬೆನ್ನ ಮೇಲೆ ಶಾಖ ಕೊಡಬೇಕು.

ಕಂದು ಹಾಕುವುದು (ಗರ್ಭಸ್ರಾವ)

ಗರ್ಭ ಧರಿಸಿದ ಪಶುಗಳಲ್ಲಿ ಅವಧಿ ತುಂಬುವ ಮೊದಲೇ ಗರ್ಭ ಪಾತವಾದರೆ ಅರೆಗರ್ಭ ಅಥವಾ ಕಂದು ಹಾಕುವುದು ಎನ್ನುತ್ತಾರೆ.

ಚಿಕಿತ್ಸೆ : 1. ಹೋರಿ ಬಿಡಿಸಿದ ನಂತರ ಗರ್ಭಧರಿಸಿದ ಪಶುವಿಗೆ ಏಳು ದಿವಸಗಳವರೆಗೆ ಪ್ರತಿದಿವಸ ಒಂದೊಂದು ನೆಲಗುಂಬಳದ ಬಳ್ಳಿಯನ್ನು ಬುಡಸಮೇತ ತಂದು ತಿನ್ನಿಸಬೇಕು. 2. ಗರ್ಭ ಧರಿಸಿದ ಪಶುವಿಗೆ ಒಂದು ತಿಂಗಳ ಕಾಲ ಪ್ರತಿದಿವಸ ಬೆಳಿಗ್ಗೆ ಒಂದೆಲಗದ ಸೊಪ್ಪನ್ನು (*Centella asiatica*) ಎರಡು ಹಿಡಿಯ ಪ್ರಮಾಣ ತೆಗೆದುಕೊಂಡು ಎರಡು ತೊಲ ಜೀರಿಗೆ ಸೇರಿಸಿ ತಿನ್ನಿಸಬೇಕು. 3. ಗರ್ಭ ದರಿಸಿದ ಪಶುಗಳು ನೋವು ಅನುಭವಿಸುತ್ತಿರುವಾಗ ಹಳೇ ಹುಣಸೆ ಹಣ್ಣನ್ನು ಒಂದು ಸೇರು ನೀರಿನಲ್ಲಿ ಕಿವುಚಿ ಅದಕ್ಕೆ ಒಂದು ಅಚ್ಚು ಬೆಲ್ಲ ಮತ್ತು 5-6 ನಿಂಬೆಹಣ್ಣಿನ ರಸ ಸೇರಿಸಿ ಕುಡಿಸಬೇಕು. 4. ಹಾಲು ಹಕ್ಕರಿಕೆ ಸೊಪ್ಪು 4 ಹಿಡಿ, ಮುಟ್ಟದರೆ ಮುನಿಸೊಪ್ಪು 4 ಹಿಡಿ, ಇವುಗಳನ್ನು ನುಣ್ಣಗೆ ಅರೆದು ಅರ್ಧಸೇರು ತಣ್ಣೀರಿನಲ್ಲಿ ಬೆರಸಿ ದಿನಕ್ಕೊಂದು ಸಲದಂತೆ ಎರಡು ದಿವಸ ಕುಡಿಸಬೇಕು. ಈ ಚಿಕಿತ್ಸೆಯನ್ನು ಗರ್ಭಧರಿಸಿದ ಮೊದಲಲ್ಲೇ ಮಾಡಬೇಕು.

ಸಂಗ್ರಹ : ಲಕ್ಷ್ಮಿ ಎಂ.ಜಿ., ಮರಳವಾಡಿ.

ಕಜ್ಜಿ

ಇದು ಚರ್ಮಕ್ಕೆ ತಗಲುವ ಅಂಟುರೋಗ, ಇವು ರೋಮಗಳಿರುವ ಜಾಗಕ್ಕೆ ಹೆಚ್ಚಾಗಿ ಆಶ್ರಯಿಸುತ್ತವೆ. ಇದು ಚರ್ಮದೊಳಗೆ ತೂರಿ ತುರಿಕೆಯುಂಟು ಮಾಡುತ್ತದೆ.

ಚಿಕಿತ್ಸೆ : 1. ಜಾಪಾಳದ (*Croton tiglium*) ಬೀಜವನ್ನು ಮೊಸರಿನಲ್ಲಿ ಅರೆದು ಮೈಗೆಲ್ಲಾ ಲೇಪಿಸಬೇಕು. 4-5 ಗಂಟೆಯನಂತರ ತಣ್ಣೀರಿನಲ್ಲಿ ಮೈತೊಳೆಯಬೇಕು.

2. ಅರ್ಧಸೇರು ಜೋಳದ ಹಿಟ್ಟಿಗೆ ಅರ್ಧ ಸೇರು ಗೇರು ಬೀಜ ಸೇರಿಸಿ ನುಣ್ಣಗೆ ಅರೆದು ನೀರು ಹಾಕಿ ಕುದಿಸಿ ಮೈಗೆಲ್ಲಾ ಹಚ್ಚಬೇಕು. 4-5 ಗಂಟೆಯ ನಂತರ ಬಿಸಿ ನೀರಿನಿಂದ ಮೈತೊಳೆಯಬೇಕು.

3. ಒಂದು ಸೇರು ಎಳ್ಳೆಣ್ಣೆಗೆ 50 ಗೇರು ಬೀಜಗಳನ್ನು ಕತ್ತರಿಸಿ ಹಾಕಿ ಮರಳುವಂತೆ ಎಣ್ಣೆಯನ್ನು ಕುದಿಸಿ. ಎಣ್ಣೆಯನ್ನು ಬಸಿದುಕೊಂಡು ಹಚ್ಚಬೇಕು.

ಕ್ಷಯರೋಗ

ಈ ರೋಗ ಕಾಣಿಸಿಕೊಂಡಾಗ ಪಶು ಚಳಿಯಾದಂತೆ ನಡುಗುತ್ತಿರುತ್ತದೆ. ಬಾಯಿಯಿಂದ ಬಿಸಿಯಾದ ಉಸಿರಾಟ ಮಾಡುತ್ತದೆ, ಮೂಗು ಒಣಗಿರುತ್ತದೆ, ಆಗಾಗ ಕೆಮ್ಮುತ್ತಿರುತ್ತದೆ. ನಂತರ ಜ್ವರ ಸಹ ಕಾಣಿಸಿಕೊಳ್ಳುತ್ತದೆ ಹಾಗೂ ವಿಪರೀತ ಬೇದಿಯಾಗುತ್ತಿರುತ್ತದೆ.

ಚಿಕಿತ್ಸೆ : ಶುಂಠಿ 1 ತೊಲ, ಮತ್ತು ಚರಾಯಿತ ಚೂರ್ಣ 2 ತೊಲ ಇವುಗಳನ್ನು ಚೆನ್ನಾಗಿ ಅರೆದು ಒಂದು ಗೊಟ್ಟದಷ್ಟು ಸರಾಯಿಗೆ ಅಥವಾ ಅನ್ನದ ಗಂಜಿಗೆ ಸೇರಿಸಿ ಕೆಲವು ದಿವಸಗಳವರೆಗೆ ಕುಡಿಸಬೇಕು. ಎದೆ ಮತ್ತು ಪಕ್ಕೆಗಳಿಗೆ ಕರ್ಪೂರದ ತೈಲವನ್ನು ಸ್ವಲ್ಪ ಎಳ್ಳೆಣ್ಣೆಗೆ ಸೇರಿಸಿ ಹಚ್ಚಿ ನೀವಬೇಕು.

1/2 ಚಟಾಕಿನಷ್ಟು ಮೀನೆಣ್ಣೆಯನ್ನು ಪ್ರತಿದಿವಸ ಒಂದು ಚಟಾಕು ಸುಣ್ಣದ ತಿಳಿನೀರು ಜೊತೆ ಕುಡಿಸಬೇಕು.

1/2 ತೊಲ ಸೋರುಪ್ಪು ಮತ್ತು 1/2 ತೊಲ ನವಸಾಗರವನ್ನು ಕುಟ್ಟಿ ಪುಡಿ ಮಾಡಿ ಒಂದು ಗೊಟ್ಟದಷ್ಟು ಅನ್ನದ ಗಂಜಿಗೆ ಸೇರಿಸಿ ದಿವಸಕ್ಕೆ 3 ಬಾರಿಯಂತೆ ಕಾಯಿಲೆ ವಾಸಿಯಾಗುವವರೆಗೂ ಕುಡಿಸಬೇಕು.

ಕೆಚ್ಚಲ ಬಾವು

ಈ ರೋಗ ಕಾಣಿಸಿಕೊಂಡ ಪ್ರಾರಂಭದಲ್ಲಿ ಕೆಚ್ಚಲಿನಲ್ಲಿ ಊತ ಕಾಣಿಸಿಕೊಳ್ಳುತ್ತದೆ. ಮೊಲೆಗಳು ಸೆಟೆದು ಗಟ್ಟಿಯಾಗುತ್ತವೆ ನಂತರ ಕೆಚ್ಚಲು ಬಿಸಿಯಾಗಿರುತ್ತದೆ. ಕೆಚ್ಚಲನ್ನು ಹಿಂಡಿದರೆ ಕೀವು ಮತ್ತು ರಕ್ತದಿಂದ ಕೂಡಿದ ಹಾಲು ಹೊರಬರುತ್ತದೆ.

ಚಿಕಿತ್ಸೆ : 1. ಬೇವಿನ ಸೊಪ್ಪು, ಹಾಲು ಕರುಬಿಕೆ ಸೊಪ್ಪು (*Lactuca runcinata*) ನಿಂಬೆತುಳಸಿ ಸೊಪ್ಪು (*Ocimum gratissimum*), ತುಪ್ಪ ಗಣಿಕೆ ಸೊಪ್ಪು ಮತ್ತು ಕೋಲು ತಗಟೆ ಸೊಪ್ಪು (*Cassia occidentalis*) ಇವುಗಳನ್ನೆಲ್ಲ ಒಂದು ಹಿಡಿ ಪ್ರಮಾಣದಲ್ಲಿ ತೆಗೆದುಕೊಂಡು ಕೆಚ್ಚಲ ಮೇಲೆ ಲೇಪಿಸಬೇಕು. ಈ ಚಿಕಿತ್ಸೆಯನ್ನು ದಿವಸಕ್ಕೆ ಎರಡು ಸಾರಿಯಂತೆ ಕಾಯಿಲೆ ಗುಣವಾಗುವವರೆಗೂ ಮುಂದುವರಿಸಬೇಕು.

2. ಬಿಳಿದಾಸವಾಳದ ಬೇರು 2 ಹಿಡಿಯಷ್ಟು ತೆಗೆದುಕೊಂಡು ಮಜ್ಜಿಗೆಯ ಜೊತೆ ಚೆನ್ನಾಗಿ ಅರೆದು ದಿವಸಕ್ಕೆ ಎರಡು ಸಲದಂತೆ 2 ದಿವಸ ಕುಡಿಸಬೇಕು.

3. ಶತಾವರಿ (ಅಶಾಡಿಬೇರು) (*Asparagus racemosus*) ಬೇರು 3 ಹಿಡಿಯಷ್ಟು, ಒಂದು ಹಿಡಿ ಕಲ್ಲುಸಕ್ಕರೆ, 1/2 ಅಥವಾ ಒಂದು ಹಿಡಿ ಕಲ್ನಾರ್ ಇವುಗಳನ್ನು ಚೆನ್ನಾಗಿ ಅರೆದು ತಿನ್ನಿಸಬೇಕು.

ಹಾವು ಕಡಿತ

1. ಅಮೃತ ಬಳ್ಳಿ (*Tinospora cordifolia*) ಯನ್ನು ಕುಟ್ಟಿ ಅದರ ರಸವನ್ನು ಕುಡಿಸಬೇಕು. ಅದೇ ರಸವನ್ನು ಕಡಿದ ಜಾಗದ ಮೇಲೆ ಹಚ್ಚಬೇಕು.

2. ಎರಡು ಹಿಡಿ ಬುಗುದಿ ಹಂಬಿನ ಸೊಪ್ಪನ್ನು (*Vallaris solanacea*) ಅರೆದು ಅರ್ದ ಸೇರು ಮಜ್ಜಿಗೆಯೊಡನೆ ಕುಡಿಸಬೇಕು.

3. ಆಡುಮುಟ್ಟದ ಗಿಡ (*Tylophora asthmatica*), ತುಂಬೆ ಸೊಪ್ಪು, ಮುತ್ತುಗದ (*Butea frondosa*) ಚಕ್ಕೆ, ಇವುಗಳನ್ನು ಅರೆದು ಮೈಗೆಲ್ಲಾ ಹಚ್ಚಿ ಉಳಿದ ರಸವನ್ನು ಕುಡಿಸಬೇಕು.

4. ಗರುಗದ ಗಿಡದ (*Eclipta alda*) ರಸವನ್ನು ಅರ್ಧ ಸೇರಿನಂತೆ ದಿವಸಕ್ಕೆ ನಾಲ್ಕು ಬಾರಿ ಕುಡಿಸಬೇಕು.

ಮಂಡಲದ ಹಾವು ಕಡಿದರೆ : ಬೂದುಗ್ನಾರೆ ಚಕ್ಕೆ, ಸರದಾಲಿ ಗಡ್ಡೆ (*Andrographis serpyllifolia*) ಗಡ್ಡೆಯನ್ನು ನೀರಿನಲ್ಲಿ ಅರೆದು ಮೈಗೆ ಹಚ್ಚಿ ಉಳಿದುದನ್ನು ಕುಡಿಸಬೇಕು.

ಸಂಗ್ರಹ : ಲಕ್ಷ್ಮಿ ಎಂ.ಎಸ್.

ಮಾಹಿತಿ : ಕೆ. ಎಸ್. ಹೇಮಾವತಿ, ದೊಡ್ಡಮುರಳವಾಡಿ.

ಅಜೀರ್ಣ

ಇದು ಸಾಮಾನ್ಯವಾಗಿ ಕರುಗಳಲ್ಲಿ ಕಂಡುಬರುತ್ತದೆ.

ಚಿಕಿತ್ಸೆ : 1. ಮೊದಲು 1/2 ಸೇರು ಹರಳೆಣ್ಣೆಯನ್ನು ಕುಡಿಸಿ ಬೇದಿಮಾಡಿಸಬೇಕು. ನಂತರ ಪುಡಿಮಾಡಿದ ಕಲ್ಲುಪ್ಪು 100 ಗ್ರಾಂ. ಒಣಶುಂಠಿ ಪುಡಿ, ಮತ್ತು ನೆಲಬೇವಿನ ಸಸ್ಯದ (*Andrgaphis paniculata*) ಪುಡಿ, ಒಂದು ಬಾಟಲ್‌ನಲ್ಲಿ ಬೆರಸಿಟ್ಟುಕೊಂಡು ಬೇಕಾದಾಗ ಕುಡಿಸಬೇಕು.

2. ಶುಂಠಿ ಮತ್ತು ಕಾಳುಗಳನ್ನು ಒರಳು ಕಲ್ಲಿನಲ್ಲಿ ಚೆನ್ನಾಗಿ ಕುಟ್ಟಿ ಪುಡಿ ಮಾಡಿಕೊಂಡು ನೀರಿಗೆ ಬೆರಸಿ ಕುಡಿಸಬೇಕು.

ಚಪ್ಪೆರೋಗ

ಈ ರೋಗವು ಬಹಳ ಮರಣಕಾರಕವಾದುದರಿಂದ ರೋಗ ತಗುಲಿದ ಕೂಡಲೇ ದನಗಳು ಸಾಯುತ್ತವೆ. ಸಾಮಾನ್ಯವಾಗಿ ರೋಗ ತಗುಲಿದ ದನಗಳು ಇದಕ್ಕಿದ್ದಹಾಗೆ ಮಂಕಾಗಿ ಮೇವು ತಿನ್ನದೆ ತಲೆಯನ್ನು ಚಾಚಿಕೊಂಡು ನಿಲ್ಲುತ್ತವೆ. ಮೆಲುಕು ಹಾಕುವುದಿಲ್ಲ. ಅವುಗಳ ಮೂಗಿನ ಸಿಂಬೆ ಒಣಗಿರುತ್ತದೆ. ಮೈಜ್ವರದಿಂದ ಸುಡುತ್ತಿರುತ್ತದೆ. ಓಡಾಡಲು ಆಗುವುದಿಲ್ಲ. ಕಾಲಿನ ಚಿಪ್ಪಿನ ಭಾಗದಲ್ಲಿ ಬಾವು ಕಾಣಿಸಿಕೊಂಡಿರುತ್ತದೆ.

ಚಿಕಿತ್ಸೆ : 1. ಬಾಳೆ ಹೂ 250 ಗ್ರಾಂ, ಜೀರಿಗೆ 200 ಗ್ರಾಂ, ಈರುಳ್ಳಿ 250 ಗ್ರಾಂ, ಕೇತರ ಗಡ್ಡೆ 250 ಗ್ರಾಂ. ಇವುಗಳನ್ನು ನುಣ್ಣಗೆ ಅರೆದು ಮಜ್ಜಿಗೆಯಲ್ಲಿ ದಿವಸಕ್ಕೊಂದು ಸಲ 3 ದಿನ ಕುಡಿಸಬೇಕು.

2. ಮಂಗರವಾಳ (*Cissus quadrangularis*) ಗಿಡದ ರಸ ಒಂದು ಪಾವು, ಕತ್ತಾಳೆ ಎಲೆಯ ರಸ 1/2 ಪಾವು ಕುಟ್ಟಿದ ಸಾಸಿವೆ 40 ಗ್ರಾಂ, ರಾಗಿ ಹಿಟ್ಟು 1/2 ಪಾವು ಇವೆಲ್ಲವನ್ನು ಕೂಡಿಸಿ 1/2 ಭಾಗ ಕುಡಿಸಿ ಉಳಿದಿದ್ದನ್ನು ಬಾವಿರುವ ಜಾಗದ ಮೇಲೆ ಕಾವು ಕೊಡಬೇಕು.

3. ಒಂದು ಸಾರಿಗೆ ಒಂದು ಪಾವಿನಷ್ಟು ಬಿಳಿಕೊಮ್ಮೆ (*Trianthema decandra*) ಗಿಡದ ರಸವನ್ನು ತೆಗೆದುಕೊಂಡು 5 ಗ್ರಾಂ. ಮೆಣಸಿನ ಪುಡಿ, 5 ಗ್ರಾಂ. ಜಜ್ಜಿದ ಬೆಳ್ಳುಳ್ಳಿಯನ್ನು ಸೇರಿಸಿ ಕುಡಿಸಬೇಕು. ಈ ರೀತಿ ದಿನಕ್ಕೆ 2 ಬಾರಿಯಂತೆ 3 ದಿನ ಕುಡಿಸಬೇಕು.

ಸಂಗ್ರಹ : ಶ್ರೀನಿವಾಸ, ಕೋಡಿಹಳ್ಳಿ

ಮಾಹಿತಿ : ಕೆ.ಎನ್. ನಂಜುಂಡಯ್ಯ, ಕೋಡಿಹಳ್ಳಿ

(ವಿ.ಸೂ. : ಈ ಮೇಲಿನ ನಾಟಿ ಪಶು ಚಿಕಿತ್ಸಾ ಕ್ರಮಗಳನ್ನು 'ಹೊನ್ನೇರು' ಸ್ಪರ್ಧೆಯಿಂದ ಆರಿಸಲಾಗಿದೆ.)

ಮಲೆನಾಡಿನ ವಿಧವಿಧದ ನಾಟಿ ಅಣಬೆ ತಳಿಗಳು

- ಸುಶೀಲಾ ವೆಂಕಟೇಶ್, ಯಲಹಂಕ ಉಪನಗರ.

ಪ್ಯಾಕೇಟ್‌ನಲ್ಲಿ ಪ್ಯಾಕಾಗಿ ಬರುವ ಬಟನ್ ಮಷರೂಮ್, ಭತ್ತದ ಹುಲ್ಲಿನ ಅಣಬೆ ಅದರಲ್ಲಿರುವ ಪ್ರೊಟೀನ್ ಅದೆಷ್ಟು ಒಳ್ಳೆಯದೆಂದು ಮಾತನಾಡುವುದನ್ನು ಕೇಳುವಾಗ ನಮ್ಮ ಮಲೆನಾಡಿನ ಅಣಬೆಗಳ ನೆನಪಾಗುತ್ತದೆ. ಅಜ್ಜ, ಅಪ್ಪ ಹುಡುಕಿ ತರುತ್ತಿದ್ದ ವಿವಿಧ ಜಾತಿಯ ಅಣಬೆಗಳು; ಅಮ್ಮ ಮಾಡುತ್ತಿದ್ದ ಅಣಬೆಯ ಸ್ವಾದಿಷ್ಟ ಅಡುಗೆಗಳು, ಮತ್ತೆ ಮತ್ತೆ ಮೆಲಕು ಹಾಕುವಂತಹ ನೆನಪುಗಳು, ಎಷ್ಟೊಂದು ಬಗೆ, ಎಷ್ಟೊಂದು ವೈವಿಧ್ಯ.

1. *ಚುಳ್ಳಳಬಿ :* ಗದ್ದೆಯ ಅಂಚಿನಲ್ಲಿ ಅಲ್ಲೊಂದು, ಇಲ್ಲೊಂದು ಕಾಣಸಿಗುವ ಇದನ್ನು ತಂದು ಬೆಂಕಿ ಕೆಂಡದ ಮೇಲೆ ಸುಟ್ಟರೆ ಅದರ ರುಚಿಗೆ ಸಾಟಿಯೇ ಇಲ್ಲ. ಕೊಬ್ಬರಿ ಎಣ್ಣೆ, ಉಪ್ಪು ಹಾಕಿ ಬೇಯಿಸಿದ ಈ ಅಣಬೆ ನಂಜಲ್ಲ. ಹಾಗಾಗಿ ಬಾಣಂತಿಗೂ ಈ ಅಣಬೆಯನ್ನು ಕೊಡಬಹುದು.

2. *ಅಕ್ಕಿ ಅಳಬಿ :* ಅಕ್ಕಿಯಂತೆ ಪುಟ್ಟದಾಗಿ, ಬೆಳ್ಳಗೆ ಇರುವ ಈ ಅಣಬೆ, ಬಯಲು ಮತ್ತು ಕಾಡಿನಲ್ಲಿ ಏಳುತ್ತದೆ. ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಮಾತ್ರ ಎದ್ದರೂ, ಏಳುವಾಗ ಮದುವೆ ದಿಬ್ಬಣದಂತೆ ಗುಡ್ಡೆ ಗುಡ್ಡೆಯಾಗಿ ಏಳುತ್ತದೆ. ತೆಳುವಾದ ದಂಟನ್ನು ಹೊಂದಿರುವ ಈ ಅಣಬೆಯನ್ನು ಕತ್ತರಿಸುವ ಪ್ರಶ್ನೆಯೇ ಇಲ್ಲ. ಇಡೀ ಅಣಬೆಯನ್ನು ಹಾಗೇ ಸ್ವಚ್ಛಮಾಡಿ ಹಾಕಿ ಗಟ್ಟಿಯಾಗಿ ಪಲ್ಯ ಮಾಡುತ್ತಾರೆ. ಮೊದಲನೇ ದಿನ ಮೊಗ್ಗಾಗಿ ಕಾಣುವ ಈ ಅಣಬೆ, 24 ಗಂಟೆಗಳೊಳಗೆ ಪೂರ್ಣ ಬೆಳೆದು ಅರಳಿ ಹಾಳಾಗಿ ಬಿಡುತ್ತದೆ. ಹಾಗಾಗಿ ಇಂತಹ ಜಾಗದಲ್ಲಿ ಇದು ಹುಟ್ಟುತ್ತದೆ ಎಂದು ಮೊದಲೇ ಗುರುತಿಸಿ, ಹುಡುಕಿದವರ ಪಾಲಿಗಷ್ಟೇ ಲಾಭ ಈ ಅಣಬೆ.

3. *ಹೆಗ್ಗಾಲ ಅಣಬೆ :* 'ದೊಡ್ಡ ವರ್ಷ ಮಳೆ' ಎಂದು ಆಡುಮಾತಿನಲ್ಲಿ ಕರೆಯುವ ಪುಷ್ಯ ಮಳೆ ಜೋರಾಗಿ ಬಿದ್ದು ಗುಡುಗು ಆರಂಭವಾದಾಗ 'ಓಹ್! ನಾಳೆ ಹೆಗ್ಗಾಲ ಅಣಬೆ' ಸಿಗುತ್ತದೆ ಎಂದು ಖಾತ್ರಿ. ಅಷ್ಟೇಕೆ, ಆ ಗುಡುಗು 'ಹೆಗ್ಗಾಲ ಅಣಬಿ ಗುಡುಗು' ಎಂದೇ ಪ್ರಚಲಿತ ಜನರ ಮಾತಿನಲ್ಲಿ. ಒಂದು - ಒಂದೂವರೆ ಅಡಿ ಆಳದ ಬೇರು ಹೊಂದಿರುವ ಈ ಅಣಬೆ ಸಾಧಾರಣವಾಗಿ ಗೆದ್ದಲು ಗೂಡಿನ ಹತ್ತಿರ ಏಳುತ್ತದೆ. ಬೇರಿನ ಸಮೇತ ಕಿತ್ತಾಗ ಬೇರಿನ ತುದಿಯಲ್ಲಿ ಗೆದ್ದಲು ಹಿಡಿದಿರುವುದನ್ನು ನೋಡಬಹುದು.

ಕಂದು ಬಣ್ಣದ ಮೊಗ್ಗು ಹೊಂದಿರುವ ಈ ಅಣಬೆಯನ್ನು ಆಳದಿಂದ ಕೀಳಬೇಕು. ಮೊಗ್ಗಾಗಿ ಇರುವಾಗ ಗಟ್ಟಿಯಾಗಿರುವ ಈ ಅಣಬೆ, 24 ಗಂಟೆಯಲ್ಲಿ 4-5 ಇಂಚಿನಷ್ಟು ಮೇಲೆ ಬಂದು ಅರಳಿ ನಿಂತಿರುತ್ತದೆ. ಇದರಲ್ಲೂ ಎರಡು ಬಣ್ಣ. ಒಂದು ಕಪ್ಪು ಮಿಶ್ರಿತ ಜಾತಿಯದಾದರೆ, ಇನ್ನೊಂದು ಬಿಳಿ ಮಿಶ್ರಿತ.

4. *ಹೈಗನ್ನ ಅಳಬಿ :* ಕಾಡಿನಲ್ಲಿ ಎಲೆ ಬಿದ್ದು ಒಣಗಿ ಕೊಳೆತ ಜಾಗದಲ್ಲಿ ಈ ಅಣಬೆ ಏಳುತ್ತದೆ. ದುಂಡಾಗಿ, ಮೊಟ್ಟೆಯಾಕಾರವಾಗಿರುವ ಈ ಅಣಬೆ ಮೇಲೆ ಕೆಂಪು ಬಣ್ಣ, ಒಳಗಡೆ ಬಿಳಿ ಬಣ್ಣ ಹೊಂದಿರುತ್ತದೆ. ಎರಡು ಇಂಚು ದಪ್ಪದಾದ ದಿಂಡನ್ನೂ ಹೊಂದಿರುತ್ತದೆ. ಇದರಲ್ಲೂ ಎರಡು ವಿಧ. ಕರಿ ಹೈಗನ್ನ ಅಳಬೆ ಮತ್ತು ಕೆಂಪು ಹೈಗನ್ನ ಅಳಬೆ. ಕರಿ ಹೈಗನ್ನ ಅಣಬೆಯನ್ನು ಪಲ್ಯ ಮಾಡಿಟ್ಟರೆ, ಮಾರನೆ ದಿನ ಅದರ ಮೇಲೆ ಎಣ್ಣೆಯ ಅಂಶ ತೇಲುತ್ತಿರುತ್ತದೆ. ಇಷ್ಟೊಂದು ಎಣ್ಣೆಯ ಅಂಶ ಕೆಂಪು ಹೈಗನ ಅಣಬೆಯಲ್ಲಿ ಕಾಣುವುದಿಲ್ಲ.

5. *ಕೊರಲ ಅಳಬಿ :* ಕಾಡಿನಲ್ಲಿ ಒಣಗಿದ ಮರದ ಬುಡದಲ್ಲಿ ಏಳುವ ಇದು ಕೆಂಪಾಗಿ ಕೋಳಿಯ ಜುಟ್ಟನ್ನು ಹೋಲುತ್ತದೆ. ಇದರ ಬೆಳವಣಿಗೆಯನ್ನು ಗಮನಿಸುತ್ತಲೇ ಇರಬೇಕು. ಈ ಅಣಬೆ ತಲೆ ಎತ್ತಿದ ಸುಮಾರು ಎಂಟು ದಿನಗಳ ನಂತರ ಇದನ್ನು ಕಿತ್ತು ಉಪಯೋಗಿಸಬೇಕು.

ಮಾಹಿತಿ : ಶ್ರೀಮತಿ ದುಗ್ಗಮ್ಮ, ಅಂಬಳಿಕೆ, ಕೊಪ್ಪ ತಾಲ್ಲೂಕು.

ಉತ್ತರ ಕರ್ನಾಟಕದ ನಾಟಿ ಹೆಸರು ತಳಿಗಳು

ಚೆನ್ನಬಸವ ರೆಡ್ಡಿ ಪಾಟೀಲ್, ಹೆಂಬರಾಳ, ರಾಯಚೂರು.

1. *ಕರಿ ಹೆಸರು ಮುಂಗಾರಿ :* ಇದು ಚಿಕ್ಕ ಗಾತ್ರದ ಕಪ್ಪು ಬಣ್ಣದ ಕಾಳು. ಸ್ವಲ್ಪ ಮಟ್ಟಿಗೆ ಉದ್ದಿನ ಕಾಳನ್ನು ಹೋಲುತ್ತದೆ. ಇದನ್ನು ತೊಗರಿಯ ಜೊತೆಗೆ ಅಕ್ಕಡಿ ಸಾಲಿನಲ್ಲಿ ಬೆಳೆಸುತ್ತಾರೆ. ಇದು ಬಳ್ಳಿಯ ರೂಪದಲ್ಲಿ ಬೆಳೆಯುತ್ತದೆ. ಇದರ ಕಾಳಿನಿಂದ ಗುಗ್ಗರಿ, ಬೇಳೆ, ಪಾಯಸ ಹಾಗೂ ಉಂಡೆಯನ್ನು ಮಾಡುತ್ತಾರೆ. ಇದನ್ನು ಜವಾರಿ ಎಂದು ಕೂಡಾ ಕರೆಯುತ್ತಾರೆ.

2. *ಮರಿ ಹೆಸರು ಅಥವಾ ಗಡ್ಡಿ ಹೆಸರು :* ಇದನ್ನು ಹಿಂಗಾರಿನಲ್ಲಿ ಜೋಳದ ಜೊತೆಗೆ ಕೃಷ್ಣಾ ನದಿ ತೀರದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಹಳ್ಳಿಗಳಲ್ಲಿ ಹಾಗೂ ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಬೆಳೆಯುತ್ತಾರೆ. ಇದರ ಕಾಳು ಕಪ್ಪಾಗಿದ್ದು ಹೊಳಪಾಗಿದೆ. ಇದರ ಕಾಳನ್ನು ಗುಗ್ಗರಿ, ಬೇಳೆ, ಪಾಯಸ, ಉಂಡೆಗಳನ್ನು ಮಾಡಲು ಉಪಯೋಗಿಸುತ್ತಾರೆ.

ಬತ್ತದ ಕೃಷಿಗೆ ಪ್ರಾಚೀನ ಭಾರತದ ಕೊಡುಗೆ

ಹೆಚ್.ಎಂ. ಚಂದ್ರಪ್ಪ, ವೈ.ಜಿ. ಷಡಾಕ್ಷರಿ, ಪ್ರಾದೇಶಿಕ ಸಂಶೋಧನಾ ಕೇಂದ್ರ, ಮೂಡಿಗೆರೆ.

ಬತ್ತದ ಬೆಳೆಯ ವೈವಿಧ್ಯತೆ ಆಗಾಧವಾದದ್ದು, ವಿಶ್ವದಾದ್ಯಂತ 50 ಸಾವಿರಕ್ಕೂ ಹೆಚ್ಚು ತಳಿಗಳನ್ನು ಈ ಬೆಳೆಯಲ್ಲಿ ಗುರುತಿಸಲಾಗಿದ್ದು ಇವುಗಳಲ್ಲಿ 20 ಸಾವಿರದಷ್ಟು ಭಾರತೀಯ ಮೂಲದವಾಗಿರುತ್ತವೆ. ಈ ಕಾರಣಕ್ಕಾಗಿ ಈ ಬೆಳೆಯ ಉಗಮ ಭಾರತವೆಂದು ಸಹಜವಾಗಿ ಪರಿಗಣಿಸಲಾಗಿದೆ. ಈಶಾನ್ಯ ಭಾರತದ (ನಾಗಾಲ್ಯಾಂಡ್, ಅಸ್ಸಾಮ್, ಮೇಘಾಲಯ ಮತ್ತು ತ್ರಿಪುರ) ಮೂಲ ನಿವಾಸಿಗಳು ಇಂದಿನ ಹಲವಾರು ಕೃಷಿ ಬೆಳೆಗಳ ವಿಕಾಸಕ್ಕೆ ಕಾರಣರಾಗಿದ್ದರೆಂಬುದನ್ನು ಪುರಾತತ್ವ ಸಂಶೋಧನೆಗಳು ತಿಳಿಸುತ್ತವೆ. ಇಲ್ಲಿಯ ನಿವಾಸಿಗಳಿಂದ ವಿಕಾಸಗೊಂಡ ಬೆಳೆಗಳಲ್ಲಿ ಬತ್ತವೂ ಒಂದಾಗಿದೆ.

ಕ್ರಿ. ಪೂ. 2600 ರಷ್ಟು ಹಿಂದೆಯೇ ಪರಿಣಿತ ವೈದ್ಯನಾದ ಶುಶ್ರುತನ ಶುಶ್ರುತ ಸಂಹಿತೆಯಲ್ಲಿ ಹಲವಾರು ಬತ್ತದ ತಳಿಗಳು, ಅವುಗಳು ಬೆಳೆಯುವ ಕಾಲ ಮತ್ತು ಔಷಧೀಯ ಗುಣಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

ಶುಶ್ರುತ ಸಂಹಿತೆಯಲ್ಲಿ ಶಾಲೀ, ಕೆಂಪು ಶಾಲೀ, ವ್ರೀಹಿ ಎಂಬ ಮೂರು ಬತ್ತದ ವಿಧಗಳನ್ನು ಗುರುತಿಸಿರುವುದು ಕಂಡು ಬರುತ್ತದೆ.

ಶಾಲೀ ಗುಂಪಿಗೆ ಸೇರಿದ ಚಳಿಗಾಲದ ಬತ್ತದ ತಳಿಗಳು ಹೆಚ್ಚು ಸ್ವಾದಯುಕ್ತವೂ ಸುಲಭವಾಗಿ ಜೀರ್ಣವಾಗುವಂತಹವೂ. ಪುಷ್ಠಿದಾಯಕವೂ, ಪಿತ್ತನಾಶಕ ಗುಣವುಳ್ಳವೂ, ವಾತ ಮತ್ತು ಕಫವನ್ನು ಸ್ವಲ್ಪಮಟ್ಟಿಗೆ ಕೆರಳಿಸುವಂತಹವೂ ಮತ್ತು ತೈಲಾಂಶವುಳ್ಳವೂ (ಜಿಡ್ಡು) ಆಗಿದ್ದವೆಂದು ತಿಳಿದುಬರುತ್ತದೆ. ಸುಗಂಧ (ವಸುಮತಿ) ಎಂಬುದು ಈ ಗುಂಪಿನ ಹಲವಾರು ತಳಿಗಳಲ್ಲೊಂದು.

ಕೆಂಪು ಶಾಲೀ (ಕೆಂಪುಅಕ್ಕಿ) ಗುಂಪಿನ ತಳಿಗಳು ಔಷಧೀಯ ಗುಣಗಳಲ್ಲಿ ಶ್ರೇಷ್ಠವಾದವುಗಳೆಂದು ತಿಳಿದುಬರುತ್ತದೆ. ಕಣ್ಣು ಮತ್ತು ತ್ವಚೆಯ ಆರೋಗ್ಯಕ್ಕೆ ಮತ್ತು ದೇಹ ಸಾಮರ್ಥ್ಯ ವರ್ಧನೆಗೆ ಈ ಗುಂಪಿನ ತಳಿಗಳು ಸೂಕ್ತವೆಂದು ತಿಳಿಸಲಾಗಿದೆ. ಈ ಗುಂಪಿನ ತಳಿಗಳು ಸುಲಭವಾಗಿ ಪಚನವಾಗುವುದಲ್ಲದೆ, ತ್ರಿದೋಶ (ವಾತ, ಕಫ ಮತ್ತು ಪಿತ್ತ) ನಿವಾರಣೆಗೆ, ಜ್ವರ ಪರಿಹಾರಕ್ಕೂ ಸೂಕ್ತವೆಂದು ಅಭಿಪ್ರಾಯಪಡಲಾಗಿದೆ.

ಬೇಸಿಗೆಯಲ್ಲಿ ಎರಡು ತಿಂಗಳಿನಲ್ಲಿ ಕಟಾವಿಗೆ ಬರುವ ಷಷ್ಠಿಕ (ಷಷ್ಠಿಕ ಸತಿಃಸತು) ಎಂಬ ತಳಿಗಳ ಬಗ್ಗೆ ಉಲ್ಲೇಖವಿದೆ. ಔಷಧೀಯ ಗುಣಗಳಲ್ಲಿ ಈ ಗುಂಪಿನ ಬತ್ತದ ತಳಿಗಳು ಕೆಂಪು ಶಾಲೀಲಿ ಗುಂಪಿನ ಬತ್ತದ ತಳಿಗಳಂತೆ ಉತ್ತಮವಾದವುಗಳೆಂದು ತಿಳಿದುಬರುತ್ತದೆ.

ಮಳೆಗಾಲದ ತಳಿಗಳನ್ನು ವ್ರೀಹಿ ಗುಂಪೆಂದು ಗುರುತಿಸಲಾಗಿದ್ದು ಇವುಗಳ ಪೈಕಿ ಕೃಷ್ಣ ಬ್ರೀಹಿ ಎಂಬ ತಳಿಯು ಔಷಧಿಯ ದೃಷ್ಠಿಯಿಂದ ಉತ್ತಮವಾದ ತಳಿಯೆಂದು ತಿಳಿಸಲಾಗಿದೆ.

ಕಾಡನ್ನು ಸುಟ್ಟು ಬೆಳೆಯಲು, ಗದ್ದೆ (ಕೈದಾರ)ಗಳಲ್ಲಿ ಮುಳುಗಡೆ ಬೆಳೆಯಾಗಿ ಮತ್ತು ನಾಟಿ ಮಾಡಿದ ಬೆಳೆಯಾಗಿಯಲ್ಲದೆ ಕೂಳೆ ಬೆಳೆಯಾಗಿ ಬೆಳೆಯಲು ಸೂಕ್ತವಾದ ತಳಿಗಳ ಬಗ್ಗೆಯೂ ಮಾಹಿತಿ ಇತ್ತೆಂದು ತಿಳಿದುಬರುತ್ತದೆ.

ಔಷಧೀಯ ಗುಣಗಳುಳ್ಳ 38-40 ತಳಿಗಳ ಬಗ್ಗೆ ಶುಶ್ರುತ ಸಂಹಿತೆಯಲ್ಲಿ ಮಾಹಿತಿ ಇದ್ದು ಉಳಿದ ಹವಾಮಾನಗಳಿಗೆ ಸೂಕ್ತವಾದ ಇನ್ನೆಷ್ಟು ತಳಿಗಳು ಆಗ ಬಳಕೆಯಲ್ಲಿದ್ದವೋ ತಿಳಿಯದು. 4500 ವರ್ಷಗಳಿಗೂ ಹಿಂದೆ ವೈದ್ಯಕೀಯ ಗ್ರಂಥವೊಂದರಲ್ಲಿ ಬತ್ತದ ತಳಿಗಳ ಗುಣ ವಿಶೇಷತೆಗಳ ಬಗ್ಗೆ ಮಾಹಿತಿ ಇತ್ತೆಂದರೆ ಬತ್ತವನ್ನು ಕೃಷಿ ಬೆಳೆಯಾಗಿ ರೂಪಿಸಲು ಎಷ್ಟು ಶತಮಾನಗಳ ಹಿಂದೆ ಪ್ರಯತ್ನಿಸಿರಬೇಕೆಂಬುದನ್ನು ಊಹಿಸಬಹುದಾಗಿದೆ.

ಪರಿಮಳದ ಅಕ್ಕಿಯ ಬತ್ತದ ವಸುಮತಿ ಹೆಸರಿನ ತಳಿಗಳು ಇಂದಿಗೂ ಸ್ವಲ್ಪ ವ್ಯತ್ಯಾಸದೊಂದಿಗೆ ಅಸ್ಸಾಮ್, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಪಂಜಾಬ್, ಒರಿಸ್ಸಾ, ಮಹಾರಾಷ್ಟ್ರ, ಕರ್ನಾಟಕ ಮತ್ತು ಜಮ್ಮು - ಕಾಶ್ಮೀರಗಳಲ್ಲಿ ಪ್ರಚಲಿತವಿವೆ.

ಆರ್ಯರು ಬತ್ತಕ್ಕೆ ಬ್ರೀಹಿ (Brihi) ಎನ್ನುತಿದ್ದರೆಂದೂ ಕಾಲಾನುಕ್ರಮದಲ್ಲಿ ಇದು ರಿಹಿಯಾಗಿದ್ದು (Rihi) ಕ್ರಮೇಣ ಇಂದಿನ Rice ಆಗಿ ಮಾರ್ಪಟ್ಟಿರಬಹುದೆಂದು ಕೆಲವರ ಅನಿಸಿಕೆ.

ಮಲೆನಾಡಿನ (ಸು)ಗಂಧ ಸಾಲಿ (ಗಣಸಾಲಿ), ಕಾಗೀಸಾಲಿ, ಪರಿಮಳವುಳ್ಳ ಬತ್ತದ ತಳಿಗಳು, ಶಾಲಿ ಗುಂಪಿಗೆ ಸೇರಿದ ಬತ್ತದ ತಳಿಗಳಾಗಿರಬಹುದು ಮತ್ತು ಅಮರ ಕೋಶದಲ್ಲಿ ಜೀರಿಗೆ ಸಂಬಾರ ಬತ್ತದ ಪ್ರಸ್ತಾಪವಿದೆ. ಮಲೆನಾಡಿನ ಇನ್ನೊಂದು ಪರಿಮಳದ ಬತ್ತದ ತಳಿ 'ಜೀರಿಗೆ ಸಣ್ಣ'. ಹೀಗೆಯೇ ಮಸಲಿ (ಮಹಸಲಿ) ಎಂಬ ಇನ್ನೊಂದು ತಳಿಯ ಹೆಸರೂ ಶುಶ್ರುತ ಸಂಹಿತೆಯಲ್ಲಿ ಉಲ್ಲೇಖವಾಗಿದೆ. ಮಲೆನಾಡಿನ ಮಸಾಲಿ ಪುಟ್ಟ ಬತ್ತದ ಹೆಸರು ಈ ತಳಿಯ ಮೂಲದ್ದಿರಬಹುದೇನೋ.

ಈಗ ನಾಡ ತಳಿಗಳ ಸಂರಕ್ಷಣೆ ಮತ್ತು ಅವುಗಳ ಗುಣವಿಶೇಷಗಳ ಅಧ್ಯಯನದ ಬಗ್ಗೆ ಅಲ್ಲಲ್ಲಿ ಕೇಳುತ್ತಿರುವವಾದರೂ ತೀವ್ರಗತಿಯ ಸಂಶೋಧನೆಗೆ ಇನ್ನೂ ಗಮನ ಹರಿಸಿಲ್ಲದಿರುವುದು ವಾಸ್ತವ ಸಂಗತಿ.

ದೇಶದ ಜೀವನಾಡಿ ಕೆರೆಗಳ ಜೀರ್ಣೋದ್ಧಾರ

ಕೆರೆಗಳು ನಮ್ಮ ಗ್ರಾಮೀಣ ಬದುಕಿನ ಜೀವನಾಡಿ. ಕೆರೆ ನೀರಾವರಿ ಹಳ್ಳಿಗಾಡಿನ ದಿನ ನಿತ್ಯದ ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಚಟುವಟಿಕೆಗಳ ಸಂಜೀವಿನಿ. ನಮ್ಮ ಪೂರ್ವಿಕರು ಕೆರೆಗಳ ನಿರ್ಮಾಣ ಮತ್ತು ಸಂರಕ್ಷಣೆಗೆ ತಮ್ಮ ತನು, ಮನ, ಧನಗಳನ್ನು ತೊಡಗಿಸಿದ್ದರಲ್ಲದೆ, ತಮ್ಮ ವಂಶಸ್ಥರನ್ನು ಬಲಿಕೊಟ್ಟ ಮನ ಮಿಡಿಯುವ ಉದಾಹರಣೆಗಳಿವೆ. ಅವರು ಕೆರೆಗಳಿಗೆ, ದೇವಸ್ಥಾನಗಳ ನಿರ್ಮಾಣ ಮತ್ತು ಸಂರಕ್ಷಣೆಗೆ ನೀಡಿದಷ್ಟೇ ಪುರಸ್ಕಾರ ನೀಡಿದ್ದರು. ರಾಷ್ಟ್ರಮಟ್ಟದಲ್ಲಿ, ಅದರಲ್ಲೂ ದಕ್ಷಿಣ ಭಾರತದ ರಾಜ್ಯಗಳ ಪೈಕಿ ವ್ಯವಸ್ಥಿತ ಕೆರೆಗಳ ಅಭಿವೃದ್ಧಿಯಲ್ಲಿ ಉತ್ತುಂಗ ಸಾಧನೆಗೈದ ಹೆಮ್ಮೆ ಕರ್ನಾಟಕ ರಾಜ್ಯದ್ದು ಹಾಗೂ ನಮ್ಮ ಪ್ರಾಚೀನ ಪರಂಪರೆಯವರದ್ದು.

ಇಂದು ರಾಷ್ಟ್ರದಲ್ಲಿ ಸುಮಾರು 1,66,000 ಕೆರೆಗಳಿವೆ. ನಮ್ಮ ರಾಜ್ಯದಲ್ಲಿ 40,012 ಕೆರೆಗಳಿದ್ದು, ಅವುಗಳಲ್ಲಿ 12,512 ಕೆರೆಗಳು ಸಂಪೂರ್ಣ ನಾಶವಾಗಿ ಉಪಯೋಗದಲ್ಲಿಲ್ಲದಂತಾಗಿದೆ. ಉಳಿದ 27,500 ಕೆರೆಗಳು ಸರ್ಕಾರ, ಸಾರ್ವಜನಿಕರು ಮತ್ತು ಗ್ರಾಮ ಸಮುದಾಯದ ನಿರ್ಲಕ್ಷ್ಯಕ್ಕೆ ಒಳಗಾಗಿ ಶಿಥಿಲಗೊಂಡು ಬಹುತೇಕ ಕೆರೆಗಳು ನೀರು ನಿಲ್ಲುವ ಅಂಗಳದ ಶೇ. 60-75 ರಷ್ಟು ಹೂಳಿನಿಂದ ಮುಚ್ಚಿ ಹೋಗಿದ್ದು, ನೀರಿನ ಸಂಗ್ರಹಣಾ ಸಾಮರ್ಥ್ಯ ಅಷ್ಟು ಪ್ರಮಾಣ ಕಡಿಮೆಯಾಗಿದೆ. ಮತ್ತೊಂದೆಡೆ ಕೆರೆ ಏರಿ, ಕೋಡಿ ಮತ್ತು ತೂಬುಗಳು ಹಾಳಾಗಿ, ಮಳೆಗಾಲದಲ್ಲಿ ಕೆರೆಯಂಗಳದ ಮೇಲ್ಭಾಗದ ಭೂಮಿಯಿಂದ ಹಳ್ಳಕೊಳ್ಳಗಳ ಮುಖೇನ ಹರಿದು ಬರುವ ನೀರಿನ ಗರಿಷ್ಠ ಪ್ರಮಾಣ ನಿಲ್ಲಲು ಸ್ಥಳವಿಲ್ಲದೇ ಕೋಡಿಯ ಮುಖಾಂತರ ನೇರವಾಗಿ ಹೊರಕ್ಕೆ ಹರಿದು ಸಮುದ್ರ ಸೇರಿ ಬಳಕೆಗೆ ಲಭ್ಯವಿಲ್ಲದೆ ವ್ಯರ್ಥವಾಗುತ್ತಿದೆ. ಇದರಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಕೆರೆಗಳು ಆರ್ಥಿಕವಾಗಿ ಲಾಭದಾಯಕವಲ್ಲವೆಂಬ ಭಾವನೆ ಮೂಡಿದೆ. ಕೇವಲ 20 ವರ್ಷಗಳ ಹಿಂದೆ ಫೆಬ್ರವರಿ ಅಥವಾ ಮಾರ್ಚ್‌ವರೆಗೆ ಗ್ರಾಮದ ದಿನ ನಿತ್ಯದ ಅಗತ್ಯಗಳಿಗಾಗುವಷ್ಟಾದರೂ ನೀರನ್ನು ತುಂಬಿಕೊಂಡು ಮುಸ್ಸಂಜೆ ಮತ್ತು ಮುಂಜಾನೆಗಳಲ್ಲಿ ಅಹ್ಲಾದಕರ ತಣ್ಣನೆಯ ಗಾಳಿ ನೀಡಿ, ಪಶುಪಕ್ಷಿ ಮತ್ತು ಮಾನವರ ಆಕಾಂಕ್ಷೆಗಳಿಗೆ ನೀರೆರೆದು, ಪರಿಸರ ಸಮತೋಲನ ಮತ್ತು ಪರಿಸರ ನೈರ್ಮಲ್ಯ ರಕ್ಷಣೆಗೆ ತನ್ನದೇ ರೀತಿಯ ಕೊಡುಗೆ ನೀಡುತ್ತಿದ್ದ ಕೆರೆಗಳೆಲ್ಲಾ ಇಂದು ಬತ್ತಿ ಬೆಂಗಾಡಾಗಿ ಗ್ರಾಮೀಣ ಪರಿಸ್ಥಿತಿ ತದ್ವಿರುದ್ಧವಾಗುತ್ತಿದೆ. ಕೆರೆಯ ಅಚ್ಚುಕಟ್ಟಿಗೆ ಮತ್ತು ಕೆರೆಯ ಅಕ್ಕಪಕ್ಕದ ತೋಟ ತುಡಿಕೆಗಳಿಗೆ ಸಕಾಲದಲ್ಲಿ ಸಾಕಷ್ಟು ನೀರುಣಿಸಿ ಅವುಗಳ ದಾಹ ನೀಗಿಸಿ ಸದಾ ಹಚ್ಚಹಸಿರನ್ನು ಹೊತ್ತು ಕೈಬೀಸಿ ಕರೆದು, ತಂಪನ್ನು ನೀಡಿ ಜನರ ಜೀವಕ್ಕೆ ಇಂಪು ನೀಡುತ್ತಿದ್ದ ತೋಟಗಳೂ ಇಂದು ಕಣ್ಮರೆಯಾಗಿವೆ. ಅಂತರ್ಜಲದ ಉಳಿವು ಕೆರೆ ನೀರಾವರಿಯನ್ನು ಅವಲಂಬಿಸಿದೆ. ಕೆರೆಗಳು ಬಡಬಗ್ಗರ ಬೆನ್ನೆಲುಬೊಂದೇ ಅಲ್ಲ, ಗ್ರಾಮದ ಉಸಿರೂ ಕೂಡ.

ಕೆರೆಗಳ ಹೂಳು ತೆಗೆದು ಜಮೀನುಗಳಿಗೆ ಹರಡುವುದರಿಂದ ಅಂಗಳಗಳಲ್ಲಿ ನೀರು ಶೇಖರಣೆಯಾಗಿ ಅಂತರ್ಜಲ ಹೆಚ್ಚುವುದು. ಕೆರೆಯ ಬಾವಿಗಳ ಸಮೀಪದ ಕೊಳವೆ ಬಾವಿಗಳಲ್ಲಿ ನೀರು ಮೇಲೆ ಸಿಗುವಂತಾಗುವುದು. ಕೆರೆಗಳ ಗೋಡು ಮಣ್ಣು ಹೆಚ್ಚು ಪೌಷ್ಟಿಕಾಂಶಗಳಿಂದ ಕೂಡಿದ ಗೊಬ್ಬರವಾಗುವುದು. ಪೂರ್ವದಲ್ಲಿ ಕೆರೆಗಳ ಗೋಡು ಜಮೀನುಗಳಿಗೆ ಹೊಡೆಯುವುದು ಮತ್ತು ಮಾಗೀ ಉಳುಮೆ ಮಾಡುವುದು ನಮ್ಮ ಕೃಷಿ ಕಾರ್ಯಗಳಲ್ಲಿ ಒಂದಾಗಿತ್ತು ಮತ್ತು ಮುಖ್ಯವಾಗಿತ್ತು. ಈಗ ಆ ಕೆಲಸ ನಡೆಯುವುದೇ ಅಪರೂಪವಾಗಿದೆ. ರೈತರು ಈ ಕಾರ್ಯಗಳನ್ನು ಸ್ವ ಇಚ್ಛೆಯಿಂದ ಕೈಗೊಳ್ಳಬೇಕು. ಒಟ್ಟಿನಲ್ಲಿ ಕೆರೆಗಳ ಜೀರ್ಣೋದ್ಧಾರ ಕಾರ್ಯಗಳು ಸರ್ಕಾರದ ಮತ್ತು ರೈತರ ಇಂದಿನ ಅವಶ್ಯಕತೆಗಳಲ್ಲಿ ಪ್ರಮುಖವಾಗಿದ್ದು ಆದ್ಯತೆ ಮೇಲೆ ಕೈಗೆತ್ತಿಕೊಳ್ಳಬೇಕಾಗಿದೆ.

ಕೃಪೆ : ಕರ್ನಾಟಕ ಪ್ರದೇಶ ಕೃಷಿ ಸಮಾಜ, ಬೆಂಗಳೂರು.

ವಿಶೇಷ ಸೂಚನೆ

ಹಿತ್ತಲ ಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

ಸಂ.

ಹಳ್ಳಿಗರ ಕುತೂಹಲಕಾರಿ ಮಳೆ ನಂಬಿಕೆಗಳು

ಜಿ. ಕೃಷ್ಣಪ್ರಸಾದ್, ತಳಿ.

ಹಳ್ಳಿಗರ ಪಾಲಿಗೆ ಮಳೆ ಬರಿಯ ನೀರಲ್ಲ; ಬದುಕಿನ ಜೀವಧಾರೆ. ಪ್ರಕೃತಿಯ ಒಡಲಿನ ವಿದ್ಯಮಾನಗಳನ್ನು ಎಚ್ಚರಿಕೆಯಿಂದ ಗಮನಿಸಿ, ಮಳೆಯ ಸಂಭವನೀಯತೆಯನ್ನು ನಿರ್ಧರಿಸುವ ಇವರ ಬದುಕಿನ ಶೈಲಿ ಅನನ್ಯ. ಇಡೀದಿನ ಹೊಲಗದ್ದೆಗಳಲ್ಲಿ ಸುತ್ತಾಡಿ, ಗಿಡಮರ, ಪ್ರಾಣಿಪಕ್ಷಿ ಮತ್ತು ಕೀಟಗಳ ನಡವಳಿಕೆಗಳನ್ನು ಅಭ್ಯಸಿಸಿ ಇವತ್ತು ಮಳೆ ಬಂದೇ ಬರುತ್ತದೆ ಎಂದು ಹಳ್ಳಿಗನೊಬ್ಬ ಖಚಿತವಾಗಿ ಭವಿಷ್ಯ ನುಡಿದರೆ, ಅದರ ಹಿಂದೆ ಅವನ ಅನುಭವ ನೆಲೆಯಾಗಿ ನಿಂತಿರುತ್ತದೆ. ಅವರ ಭವಿಷ್ಯದಂತೆ ಮೋಡ ಕವಿದು, ಮಳೆ ಸುರಿಯುವ ಹೊತ್ತಲ್ಲಿ, ಹವಾಮಾನ ತಜ್ಞರು ರೇಡಿಯೋ, ದೂರದರ್ಶನಗಳಲ್ಲಿ ಒಣ ಹವೆ ಇದ್ದು, ಮುಂದಿನ 48 ಘಂಟೆಗಳಲ್ಲಿ ಮಳೆಯ ಸಂಭವ ಇಲ್ಲ ಎಂಬ ತಮ್ಮ ಮಾಮೂಲಿ ರಾಗವನ್ನೇ ಮತ್ತೆ ಹಾಡುತ್ತಾರೆ. ಮಳೆಯಲ್ಲಿ ನೆನೆದ ರೈತರು ಇದನ್ನು ಕೇಳಿ ನಗುವುದೊಂದೇ ಬಾಕಿ!

ಆಧುನಿಕ ವಿಜ್ಞಾನದ ಅಳತೆಗೋಲಿಗೆ ಸಿಕ್ಕದ, ತಲೆ ತಲೆಮಾರುಗಳ ಅನುಭವದಿಂದ ರೂಪಗೊಂಡ ಹಳ್ಳಿಗರ ಮಳೆನಂಬಿಕೆಗಳತ್ತ ಇಣುಕುನೋಟ ಇಲ್ಲಿದೆ:

★ ಹುಲ್ಲಿನ ಮೇಲೆ ಎಂಜಲು ಉಗಿದಂತೆ ಕಾಣುವ ನುರುಗು ಹುಳು, ಹುಲ್ಲಿನಲ್ಲಿ ಜಾಸ್ತಿ ಇದ್ದರೆ ಮಳೆ ಬರುವುದು ವಿಳಂಬವಾಗುತ್ತದೆ. ಈ ಹುಳುಗಳು ರಾಗಿ ಹೊಲದಲ್ಲಿ ಹೆಚ್ಚು ಕಂಡು ಬಂದರೆ, ಒಂದು ವಾರದೊಳಗೆ ಮಳೆ ಗ್ಯಾರಂಟಿ.

★ ಉಗನೀ ಬಳ್ಳಿ (*Lettsomia thomsoni*) ತುಂಡಾಗದೆ, ಚೆನ್ನಾಗಿ ಹಂಬು ಬೆಳೆದ ವರ್ಷ ಒಳ್ಳೆ ಮಳೆ, ಬೆಳೆ ನಿರೀಕ್ಷಿಸಬಹುದು.

★ ಮಳೆ ಇಲ್ಲದ ದಿನ, ಬೆಟ್ಟಗಳಲ್ಲಿ ಮಂಜು ಹಿಡಿದರೆ, ವಾರದೊಳಗೆ ಮಳೆ ಬರುತ್ತದೆ. ಜಡಿಮಳೆ ಇದ್ದು, ಬೆಟ್ಟಗಳಲ್ಲಿ ಮಂಜು ಹಿಡಿದರೆ. ಮಳೆ ಬಿಡುತ್ತದೆ ಇಲ್ಲ ಮಳೆ ಜಾಸ್ತಿಯಾಗುತ್ತದೆ.

★ ಕೊಡತಿ ಹುಳು (Dragon fly) ಗುಂಪಾಗಿ, ನೆಲ ಕಚ್ಚಿದರೆ, (ನೆಲ ಮೂಸುತ್ತಿದ್ದರೆ) 3 ದಿನದೊಳಗೆ ಮಳೆ ಬರುತ್ತದೆ.

★ ಹುಣಸೇ ಮರ (*Tamarindus indicus*) ಹೂ ಜಾಸ್ತಿ ಬಿಟ್ಟ ವರ್ಷ, ಮಳೆಯ ಪ್ರಮಾಣ ಕೂಡ ಅಧಿಕ.

★ ನಂದಿ ಮೂಲೆ ಅಥವಾ ದೇವ ಮೂಲೆ (North East Corner) ಯಲ್ಲಿ ಮಿಂಚುತ್ತಿದ್ದರೆ ಮಳೆ ತಪ್ಪದೆ ಬರುತ್ತದೆ. ದೇವಮೂಲೆಯಲ್ಲಿ ಮಿಂಚುವುದನ್ನು ಕಂಡ ಹಿರಿಯರು "ಮಳೆ ಬರುತ್ತದೆ, ದನಗಳನ್ನು ಕೊಟ್ಟಿಗೆಗೆ ಕಟ್ಟಿ" ಎನ್ನುತ್ತಿದ್ದರು. ನಿಖರವಾದ ಮಳೆ ನಂಬಿಕೆಯಿದು.

★ ತೆಳುವಾಗಿ ಹರಿಯುತ್ತಿರುವ ಹಳ್ಳದ ನೀರು, ಕೆಲವು ಕಡೆ ಭೂಮಿಯೊಳಗೆ ಇಂಗಿ ಹೋದರೆ ಮಳೆ ಬರುತ್ತದೆ ಎಂದು ನಂಬಲಾಗುತ್ತದೆ. ನೀರು ಇಂಗುವ ಸ್ಥಳಗಳನ್ನು ಅನುಭವದಿಂದ ಗುರುತಿಸುತ್ತಾರೆ.

★ ಕಪ್ಪು ಇರುವೆ ತನ್ನ ಗೂಡಿಂದ ಮೊಟ್ಟೆ ಸಾಗಿಸಿದರೆ, 3 ದಿನದೊಳಗೆ ಮಳೆ ಗ್ಯಾರಂಟಿ.



★ ಕೆಂಬೂತ, ಕೋಗಿಲೆ ಕೂಗಿ ಕೊಂಡರೆ ಮಳೆಯೋಗ ಇದೆ ಎಂದರ್ಥ.

★ ಸೂರ್ಯ ಹುಟ್ಟುವ ಸ್ವಲ್ಪ ಹೊತ್ತಿನ ಮೊದಲು, ಪೂರ್ವದಿಂದ ಪಶ್ಚಿಮಕ್ಕೆ ಬಿಳಿ ಮೋಡ ಕಾಲುವೆ ತರ ಗೋಚರಿಸಿದರೆ ಆವತ್ತು ಮಳೆ ಬರುತ್ತದೆ.

★ ಮನೆ ಕೋಳಿ ರೆಕ್ಕೆ ಹರಡಿ, ಬಿಸಿಲು ಕಾಯಿಸಿದರೆ ಮಳೆ ಬರುತ್ತದೆ.

★ ಒಣ ಭೂಮಿಯ ಕಲ್ಲಿನ ಕೆಳಗೆ ಕಪ್ಪೆ ಒಂದೇಸಮನೆ 'ವಟ ವಟ' ಎಂದು ಕೂಗಿಕೊಂಡರೆ ಮಳೆ ಬರುವ ಸಂಭವ ಜಾಸ್ತಿ.

(ವಿ.ಸೂ. ಈ ರೀತಿಯ ಪರಸರ, ಪ್ರಾಣಿ, ಪಶು, ಪಕ್ಷಿಗಳ ಬಗ್ಗೆ ನಿಮಗೆ ತಿಳಿದಿರುವ ಕಥೆ, ಲಾವಣಿ, ಒಗಟು, ನಂಬಿಕೆಗಳನ್ನು ಹಿತ್ತಲಗಿಡಕ್ಕೆ ಬರೆದು ಕಳುಹಿಸಿರಿ. ಸಂ.)

ಒಂದು ಮನವಿ

ಕಾಗದದ ಬಳಕೆಯನ್ನು ಮಿತಿಗೊಳಿಸಿ, ಕಾಗದವನ್ನು ಪುನರ್‌ಬಳಸಿ, ಕಾಗದದ ಪುನರುತ್ಪಾದನಾ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಿ.

ಕಾಗದ ಕಟ್ಟೆ, ಬೆಂಗಳೂರು

★ ಸೂರ್ಯನ ಸುತ್ತ ವೃತ್ತಾಕಾರದ ಉಂಗುರ ಮೂಡುತ್ತದೆ. ಇದು ಸೂರ್ಯನಿಗೆ ಸಮೀಪವಾಗಿದ್ದರೆ ದೂರದಲ್ಲಿ ಮಳೆಯಾಗುತ್ತದೆ. ಉಂಗುರ ದೂರದಲ್ಲಿದ್ದರೆ, ಉಂಗುರ ಗೋಚರಿಸಿದ ಸ್ಥಳದಲ್ಲಿ ಮಳೆಯಾಗುತ್ತದೆ. ಸೂರ್ಯನಿಗೆ ಗುಡಿಕಟ್ಟುವುದು ಎಂದು ಹಳ್ಳಿಗರು ಗುರುತಿಸುವ ಈ ವಿದ್ಯಮಾನ ಮಧ್ಯಾಹ್ನ 3 ಘಂಟೆಗಯ ಹೊತ್ತಿನಲ್ಲಿ ಗೋಚರಿಸುತ್ತದೆ.

★ ಶತಾವರೀ (*Asparagus racemosus*) ಬಳ್ಳಿ ಚೆನ್ನಾಗಿ ಹರಿದ ವರ್ಷ, ಮಳೆ ಬೆಳೆ ಉತ್ತಮ.


★ ನವಿಲು, ಕಾಡುಕೋಳಿ ಕೂಗಿಕೊಂಡರೆ 3 ದಿನ ದೊಳಗೆ ಮಳೆ ಗ್ಯಾರಂಟಿ.

★ ಕಡ್ಡಿ ಜೇನಿನ ತುಪ್ಪ ಗಪ್ಪ ಗಟ್ಟಿಯಾದರೆ ಮಳೆ ಬರುವುದು ವಿಳಂಬವಾಗುತ್ತದೆ. ಜೇನು ತುಪ್ಪ ತೆಳುವಾಗಿದ್ದರೆ ಮಳೆ ಬರುವ ಸಂಭವ ಜಾಸ್ತಿ.

★ ಗೊಟ್ಟಿಮರ ಕಾಯಿ ಜಾಸ್ತಿ ಬಿಟ್ಟ ವರ್ಷ ಬರಗಾಲ ಬರುತ್ತದೆ.

★ ಅಗ್ನಿ ಮೂಲೆಯಲ್ಲಿ (ಪೂರ್ವ ದಕ್ಷಿಣದ ಮೂಲೆ, East South Corner) ಮಿಂಚಿದರೆ, ಆ ದಿನ ಮಳೆ ಬರುವುದಿಲ್ಲ.

★ ಮನೆಯೊಳಗಿನ ರಾಗಿ ಕಲ್ಲಿನ ಸುತ್ತ ಗೆದ್ದಲು ಹತ್ತಿದ್ದರೆ, 3 ದಿನದೊಳಗೆ ಮಳೆ ಬರುತ್ತದೆ.



ಹುಡುಕುತ್ತಾ ಹೋದರೆ ಇಂಥ ಹತ್ತೆಂಟು ಮಳೆ ನಂಬಿಕೆಗಳು ನಮ್ಮ ನಡುವೆಯೇ ಅಡಗಿರುತ್ತವೆ.

ಮಾಹಿತಿದಾರರು : ಕಾವೇರಪ್ಪ, ಲಕ್ಷ್ಮಮ್ಮ, ಲಕ್ಷ್ಮೀಪುರ
ಮಾಸ್ತಪ್ಪ, ಮದ್ದೂರಪ್ಪ, ಮಾಸ್ತಿಪ್ಪನ ದೊಡ್ಡಿ
ನಾಗರಾಜ್, ಅಂಡ್ಲೇಮಾರ ದೊಡ್ಡಿ.

ಈ ಫಸಲಿನ ಮುನ್ಸೂಚನೆಗೆ ಕಂಪ್ಯೂಟರ್ ಬೇಕಿಲ್ಲ

ಜಿ. ಕೃಷ್ಣಪ್ರಸಾದ್, ತಳಿ.

ಮಳೆಯ ಬಗ್ಗೆ ಕೆಲವು ನಂಬಿಕೆಗಳಿದ್ದಂತೆ, ಫಸಲಿನ ಬಗ್ಗೆಯೂ ರೈತರಿಗೆ ಕೆಲವು ಅನುಭವದಿಂದ ಕಲಿತ ಪಾಠಗಳಿವೆ. ಮುಂದಾಗುವ ಫಸಲನ್ನು ಮೊದಲೆ, ನಿರೀಕ್ಷಿಸಬಹುದಾದ ಸಾಧ್ಯತೆಗಳಲ್ಲಿ ಕೆಲವು ಹೀಗಿವೆ :

ಕಾರೆಗಿಡ (*Canthium parviflorum*) ಹೆಚ್ಚು ಕಾಯಿ ಬಿಟ್ಟರೆ, ಆ ವರ್ಷ ಅವರೆ ಫಸಲು ಜಾಸ್ತಿ.

ಕಳೆಯಾಗಿ ಬೆಳೆಯುವ ಲಂಟಾನ ಗಿಡ (*Lantana camara*) ಕಾಯಿ ಜಾಸ್ತಿ ಬಿಟ್ಟ ವರ್ಷ, ಹುರುಳಿ ಫಸಲು ಹೆಚ್ಚು.

ಈಚ ಮರ (*Premlna tomentosa*) ಕಾಯಿ ಜಾಸ್ತಿ ಬಿಟ್ಟ ವರ್ಷ ಎಳ್ಳು, ಉದ್ದು ಮೊದಲಾದ ಕರಿಧಾನ್ಯದ ಫಸಲು ಜಾಸ್ತಿ.

ಬಿಳಿ ಸೂಲಿ ಕಾಯಿ ಜಾಸ್ತಿ ಬಿಟ್ಟ ವರ್ಷ, ಬಿಳಿ ಧಾನ್ಯದ ಫಸಲು ಜಾಸ್ತಿ.

ದೆಂಸರೆ ಮರ (*Polyalthia longifolia*) ಗೊಂಚಲು ಗೊಂಚಲಾಗಿ ಹೆಚ್ಚು ಹಣ್ಣು ಬಿಟ್ಟರೆ, ಆ ವರ್ಷ ರಾಗಿ ಬೆಳೆ ಚೆನ್ನಾಗಿ ಆಗುತ್ತದೆ.

ಮಿಂಡಿಗಿಡ ಕಾಯಿ ಜಾಸ್ತಿ ಬಿಟ್ಟ ವರ್ಷ, ತೊಗರಿ ಬೆಳೆ ಉತ್ತಮ.

ಈ ರೀತಿಯ ಅನುಭವದ ಪಾಠಗಳು ರೈತರಿಗೆ ಬೇಕಾದ ಬೆಳೆ ಬಿತ್ತನೆಯಲ್ಲಿ ನೆರವಾಗುತ್ತದೆ.

ಮಾಹಿತಿ : ಕಾವೇರಪ್ಪ, ಲಕ್ಷಮ್ಮ, ಲಕ್ಷ್ಮೀಪುರ
ಮಾಸ್ತಪ್ಪ, ಮದ್ದೂರಪ್ಪ, ಮಾಸ್ತಪ್ಪನ ದೊಡ್ಡಿ.

ಕೃಷಿ ಗಾದೆಗಳು

- ಭರಣಿ ಮಳೆ ಬಂದರೆ ಧರಣಿ ತುಂಬಾ ಕಾಳು.
- ರೋಹಿಣಿ (ರೋಣಿ) ಮಳೆ ಬಂದರೆ, ಓಣಿ ತುಂಬಾ ಜೋಳ.
- ಉತ್ತರೆ ಮಳೆ ಬಂದರೆ, ಸತ್ತವನ ಜೀವ ಬಂತು.
- ಉಬ್ಬೆ ಮಳೆ ಬಂದರೆ, ಗುಬ್ಬಿ ಕುಡಿಯೋಕೆ ನೀರಿಲ್ಲ.
- ಸ್ವಾತಿ ಮಳೆಯಾದ ಮೇಲೆ, ಯಾತರಮಳೆ.
- ಆದ್ರೆ ಅರಿದ್ರ, ಆಗದಿದ್ರೆ ದರಿದ್ರ.
- ಅನುರಾಧ ಮಳೆಯಿಂದ ಆನೆ ಮೈ ಕೂಡಾ ನಡುಗುತ್ತೆ.
- ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ಬಳ್ಳ.
- ತಳಿ ನೋಡಿ ಬೀಜ ತಾ. ಮನೆ ನೋಡಿ ಹೆಣ್ಣು ತಾ.

ಸಂಗ್ರಹ : ನಾಗರತ್ನ

ಹುಳಿ ಚಿಕ್ಕಪ್ಪು (*Oxalis corniculata*) ಔಷಧಿ ಮತ್ತು ಆಹಾರ ಸಸ್ಯ

ಎಸ್. ರೋಹಿಣಿ ಶರ್ಮಾ, ಅಜ್ಜಂಪುರ.

ಆಹಾರಕ್ಕೆ ತರಕಾರಿಯಾಗಿ ಆರೋಗ್ಯಕ್ಕೆ ಹಿತಕಾರಿಯಾಗಿ, ಅತ್ಯಧಿಕ ಪೌಷ್ಠಿಕಾಂಶಗಳ ಗಣಿಯಾಗಿ ಬಳಸಲ್ಪಡುವ ಸೊಪ್ಪುಗಳನ್ನು ದಿನನಿತ್ಯ ಒಂದಲ್ಲಾ ಒಂದು ವಿಧದಲ್ಲಿ ಬಳಸುತ್ತಲೇ ಇರುತ್ತೇವೆ. ಬೆಳಸಿಕೊಂಡು ತಿನ್ನುವ ಸೊಪ್ಪುಗಳು ಕೆಲವಾದರೆ, ಇನ್ನು ಕೆಲವು ಎಲ್ಲೆಂದರಲ್ಲಿ ಬೆಳೆಯುವ ಕಳೆ. ಅಂಥ ಕಳೆ ಜಾತಿಗೆ ಸೇರಿದ ಹುಳಿ ಚಿಕ್ಕಪ್ಪು ಅಬಾಲರಿಂದ ಹಿಡಿದು ವೃದ್ಧರವರೆಗೂ ಆಕರ್ಷಿಸಿ ಬಾಯನ್ನು ಹುಳಿ ಹುಳಿ ಮಾಡಿ ಮತ್ತೆ ಮತ್ತೆ ಕಿತ್ತು ತಿನ್ನುವಂತೆ ಮಾಡುತ್ತದೆ. ಈ ಪುಟ್ಟ ಸೊಪ್ಪಿಗೆ ಹೆಸರಿಡುತ್ತಾ ಹೋದರೆ ಉದ್ದ ಪಟ್ಟಿಯೇ ಬೆಳೆದು ಬಿಡುತ್ತದೆ. ಹುಳಿ ಹುಣಸೆ, ಉದ್ದಿನ ಸೊಪ್ಪು, ಪುಟಂ ಪುರಚಿ, ಪುಲ್ಲ ಪುರಚಿ. ಚಿತ್ರಿಕಾ, ಚಾಂಗೇರಿ, ಆಮ್ಲಿ, ಹುಲಿಚಿಂತಾ, ಇಂಡಿಯನ್ ಸಾರೆಲ್ ಹಾಗೂ ಹುಳಿ ಚಿಕ್ಕಪ್ಪು, ಉಪ್ಪುಪ್ಪಿನ ಸೊಪ್ಪು ಎಂದೂ ಗುರುತಿಸಲ್ಪಟ್ಟಿದೆ. ಇವಿಷ್ಟೇ ಹೆಸರು ಸಾಲದೆಂಬಂತೆ ಆಯುರ್ವೇದ ಗ್ರಂಥವಾದ ಭಾವ ಪ್ರಕಾಶ ಗ್ರಂಥದಲ್ಲಿ ಅಮಲ, ಆಮ್ಲಿಕ, ಲೋನೀಕ, ಚುಕ್ರಿತ ಎಂದು ದಾಖಲಿಸಿದ್ದಾರೆ. ಇದೊಂದು ಅಪ್ಪಟ ಸ್ವದೇಶಿ ಸೊಪ್ಪು. ಇತರೆ ಸೊಪ್ಪು ತರಕಾರಿ ಜೊತೆ ಈ ಸೊಪ್ಪನ್ನು ಮಿಶ್ರಮಾಡಿ ಅಡಿಗೆ ತಯಾರಿಸಿದರೆ ಕಬ್ಬಿಣ ಖನಿಜಾಂಶ ಹಾಗೂ 'ಎ' 'ಬಿ' ಅನ್ನಾಂಗಗಳನ್ನು ಜೊತೆಗೆ ಸೇರಿಸಿಕೊಳ್ಳಬಹುದು. ಹುಳಿಗಾಗಿ ಬೇರೆ ಹುಳಿ ಪದಾರ್ಥ ಹಾಕುವ ಅವಶ್ಯಕತೆಯೂ ಇರುವುದಿಲ್ಲ.

ಇದನ್ನು ಗುರುತಿಸುವುದು ಬಹಳ ಸುಲಭ. ಏಳು ಸೆಂ. ಮೀ. ನಿಂದ ಹದಿನೈದು ಸೆಂ.ಮೀ. ಎತ್ತರಕ್ಕೆ ದುರ್ಬಲ ಕಾಂಡವಾಗಿ ಬೆಳೆಯುತ್ತದೆ. ಎಲೆಹಸಿರಾಗಿ, ಹಳದಿ ಬಣ್ಣದ ಹೂವಿನಿಂದ ಕೂಡಿದ ಇದರ ಫಲ, ಸಂಪುಟ ಮಾದರಿಯಲ್ಲಿರುತ್ತದೆ. ಹಸ್ತಾಕಾರವನ್ನು ಹೋಲುವ ಇದರ ಎಲೆಯಲ್ಲಿ ಮೂರು ಹಾಳೆಗಳಿರುತ್ತವೆ. ಉಪ ಎಲೆಗಳು ಸುಮಾರು 2.5 ಸೆಂ.ಮೀ. ಅಗಲವಾಗಿರುತ್ತದೆ. ಮಳೆಗಾಲದಲ್ಲಿ ಇದರ ಬೆಳೆ ಸಮೃದ್ಧವಾದರೂ ತೇವಾಂಶ ಇರುವ ಜಾಗದಲ್ಲಿ ಎಲ್ಲಾ ಕಾಲದಲ್ಲೂ ಯಾವಾಗಲೂ ಬೆಳೆಯುತ್ತದೆ. ಈ ಸೊಪ್ಪಿನ ಎಲೆಗಳಲ್ಲಿ ಆಕ್ಸಾಲಿಕ್ ಆಸಿಡ್, ಪೊಟಾಸಿಯಂ ಆಕ್ಸಲೇಟ್, 'ಸಿ' ಅನ್ನಾಂಗ ವಿಶಿಷ್ಟವಾಗಿದೆ. ಲಘು ಪ್ರಮಾಣದಲ್ಲಿ ಟಾರ್ಟಾರಿಕ್ ಹಾಗೂ ಸಿಟ್ರಿಕ್ ಆಮ್ಲಗಳಿರುವುದರಿಂದ ಎಲೆ ಹುಳಿಯಾಗಿರಲು ಕಾರಣವಾಗಿದೆ. ತಿಂದಾಗ ಹಲ್ಲು ಜುಮ್ ಎನ್ನುವುದರಿಂದ "ದಂತಶಠ" ಹೆಸರು ಬಂದಿದೆ. ಉಷ್ಣವಲಯದ ಸಸ್ಯವಾದ ಇದನ್ನು ಬೆಚ್ಚಗಿನ ವಾತಾವರಣದಲ್ಲೂ ಬೆಳೆಸಬಹುದು, ಆದರೆ ಯಾವಾಗಲೂ ಫಲವತ್ತಾದ ಮಣ್ಣು, ನೀರು ಬಸಿದು ಹೋಗುವಂತಿದ್ದರೆ ಅಂಥ ಜಾಗದಲ್ಲಿ ಇದು ಸೊಂಪಾಗಿ ಬೆಳೆಯುತ್ತದೆ. ಈ ಹುಳಿ ಚಿಕ್ಕಪ್ಪನ್ನು ವಿಶೇಷವಾಗಿ ಆಯುರ್ವೇದ ಔಷಧಿಗಳಲ್ಲಿ ಬಳಸುವುದರಿಂದ ದೊಡ್ಡ ಪ್ರಮಾಣದಲ್ಲಿ ಬೆಳೆಸುತ್ತಾರೆ.

ಆಯುರ್ವೇದದಲ್ಲಿ ಇದರ ಉಪಯೋಗ ಬಹಳ. ಅದರ ಪ್ರಕಾರ ಇದು ಲಘುವೂ, ರೂಕ್ಷವೂ, ಆಮ್ಲವೂ, ಕಿಂಚಿತ್ ಕಷಾಯವೂ, ಉಷ್ಣವೀರ್ಯವೂ ಆಗಿದ್ದು ವಿಪಾಕದಲ್ಲಿ ಆಮ್ಲಗುಣ ಹೊಂದಿದೆ. ಆಗಾಗ್ಗೆ ಎಲೆಗಳನ್ನು ಹಾಗೆಯೇ ತಿನ್ನುವುದರಿಂದ ಹಲ್ಲು ಶುಭ್ರಗೊಳ್ಳುತ್ತದೆ. ಅಡಿಕೆ ಎಲೆಹಾಕಿ ಹಾಕಿ ಕೆಂಪಾಗುವ ಹಲ್ಲನ್ನು ಶುಭ್ರವಾಗಿಟ್ಟುಕೊಳ್ಳಬೇಕೆನಿಸಿದರೆ ಈ ಸೊಪ್ಪು ತಿಂದರೆ ಸರಿ. ಹಲ್ಲಿಗೆ ಹೊಳಪು ಬರುತ್ತದೆ.

ಎಲೆಯ ರಸವನ್ನು ರಕ್ತಹೀನತೆ, ಕಿವಿನೋವಿಗೆ ಬಳಸುತ್ತಾರೆ. ಈ ಸೊಪ್ಪಿನ ರಸದಿಂದಲೇ ತಯಾರಾಗುವ ಸಿದ್ಧೌಷಧಿ 'ಚಾಂಗೇರಿಘೃತ' ವನ್ನು ಒಂದು ಚಮಚ ಪ್ರಮಾಣದಲ್ಲಿ ಬಿಸಿ ನೀರಿಗೆ ಹಾಕಿ ಕುದಿಸಿ ಕುಡಿದರೆ ಆಮಶಂಕೆ, ಬೇದಿ, ಗುದಭ್ರಂಶ, ಹೊಟ್ಟೆ ಉಬ್ಬರ ಇವೆಲ್ಲಾ ಕಡಿಮೆಯಾಗುವುದು. ಚಾಂಗೇರಿ ಘೃತ ನಾವೇ ಬೇಕಾದರೆ ಮಾಡಿಕೊಳ್ಳಬಹುದು. ಹಸುವಿನ ತುಪ್ಪ, ಎಲೆರಸ ಅರ್ಧಭಾಗ, ಮೊಸರು 4 ಭಾಗ, ಎಲೆ ಅರೆದ ಚಟ್ನಿ 1/4 ಭಾಗ ಮಿಶ್ರಮಾಡಿ ನೀರು ಆರುವವರೆಗೆ ಕುದಿಸಿ, ತುಪ್ಪಬಂದಾಗ ಸಂಗ್ರಹಿಸಿಟ್ಟುಕೊಳ್ಳಬೇಕು. ತಲೆನೋವಿದ್ದರೆ ಈ ತುಪ್ಪಕ್ಕೆ ಈರುಳ್ಳಿರಸ ಬೆರೆಸಿ ಹಚ್ಚಿದರೆ ಸರಿ, ಊತವಿದ್ದ ಭಾಗಕ್ಕೆ ಕಲ್ಕಮಾಡಿ ಹಚ್ಚಬೇಕು. ವಿಷಜಂತು ಕಚ್ಚಿದರೆ ತಕ್ಷಣ ಇದರ ರಸ ಹಿಂಡಿಬಿಡಿ. ಕಾಲಿನ ಆಣಿಗೂ ಇದರ ರಸ ಬಲು ಶ್ರೇಷ್ಠ. ಎಲೆಯ ಕಷಾಯ ಜೀರ್ಣಕಾರಿ. ಶಕ್ತಿವರ್ಧಕ, ಜ್ವರದ ತಾಪ ಇಳಿಸಲೂ ಈ ಕಷಾಯ ಸಹಕಾರಿ. ಸ್ಕರ್ವಿ ರೋಗಕ್ಕೆ ಎಲೆರಸಕ್ಕೆ ಜೇನುತುಪ್ಪ ಬೆರಸಿ ಸೇವಿಸಬೇಕು.

ಹಾಳು ಬಿದ್ದನೆಲ, ಹಾದಿಯ ಬದಿ, ಹೂವಿನ ಕುಂಡ ಹೀಗೆ ಎಲ್ಲೆಂದರಲ್ಲಿ ಸಮೃದ್ಧವಾಗಿ ಬೆಳೆದ ಈ ಸೊಪ್ಪು ಕಳೆ ಅಲ್ಲ. ಆಹಾರಕ್ಕೆ ಸೊಪ್ಪಾಗಿ ಆರೋಗ್ಯಕ್ಕೆ ಹಿತಕಾರಿಯಾಗಿ ಬಳಕೆಗೆ ಬರುವ ಈ ಸೊಪ್ಪನ್ನು ಕಳೆ ಎಂದು ಕೀಳಬೇಡಿ! ಅದು ಬಹು ಅಮೂಲ್ಯ ಔಷಧಿ ಸಸ್ಯ.

ಬಾಯಿ ಹುಣ್ಣು

ಬಿಳಿ ತುಂಬೆ ಹೂವಿನ ಗಿಡದ ಬೇರು ಒಂದಿಂಚು, ಎರಡು ಕಾಳು ಮೆಣಸು, ಒಂದು ಚಮಚ ಜೀರಿಗೆ, ಒಂದು ಸಣ್ಣ ಚೂರು ಹಲಸಿನ ಮರದ ಅಣಬೆ, ಒಂದು ಸಣ್ಣ ತುಂಡು ಕಲ್ಲುಸಕ್ಕರೆ, ಒಂದೆರಡು ಒಣದ್ರಾಕ್ಷಿ ಇವಿಷ್ಟನ್ನೂ ಚೆನ್ನಾಗಿ ಕುಟ್ಟಿ ಪುಡಿ ಮಾಡಿ ಎರಡು ಲೋಟ ನೀರಿಗೆ ಹಾಕಿ ಅದರ ಅರ್ಧದಷ್ಟು ಬತ್ತುವವರೆಗೆ ಕುದಿಸಿ. ತಣ್ಣಗಾದ ಮೇಲೆ ಹಾಲಿನ ಜೊತೆ ಸಮ ಪ್ರಮಾಣದಲ್ಲಿ ಬೆರೆಸಿ ಖಾಲಿ ಹೊಟ್ಟೆಗೆ ಈ ಕಷಾಯವನ್ನು ಮೂರು ದಿನ ಎರಡೂ ಹೊತ್ತು ಕುಡಿಯಬೇಕು. ಜೊತೆಗೆ, ಹಲಸಿನ ಮರದ ಅಣಬೆಯನ್ನು ಹಾಲಿನಲ್ಲಿ ತೇದು ನೆಕ್ಕಲು ಕೊಡಬೇಕು.

ಎಷ್ಟೇ 'ಬಿ' ವಿಟಮಿನ್ ಮಾತ್ರೆ ತಿಂದರೂ ಮತ್ತೆ ಮತ್ತೆ ಕಾಟ ಕೊಡುವ ಬಾಯಿಹುಣ್ಣು ಮೇಲಿನ ಔಷಧಿಗೆ ಸಂಪೂರ್ಣ ಗುಣ ಕಾಣುವುದಂತೆ.

ವಾಂತಿ ಬೇದಿ

ಒಣ ನಿಂಬೆಹಣ್ಣಿನ ಸಿಪ್ಪೆಯನ್ನು ಸುಟ್ಟು, ಅದರ ಕರಿಯನ್ನು ಜೇನುತುಪ್ಪದಲ್ಲಿ ಕಲಸಿ ನೆಕ್ಕಿಸಿದರೆ, ವಾಂತಿ-ಬೇದಿ ಕಡಿಮೆಯಾಗುತ್ತದೆ.

ಹಾವಿನ ವಿಷ

ಮಲೆನಾಡೆಂದರೆ ಕಾಡು, ಗುಡ್ಡ, ಮಳೆಯ ನೆನಪು. ತೋಟ ಕಾಡುಗಳಲ್ಲಿ ಹರಿದಾಡುವ ಹಾವು ಕಚ್ಚಿದರೆ! ಅಲ್ಲಿಯ ಜನ ಹಾವು ಕಚ್ಚಿದಾಗ ಮಾಡುವ ಔಷಧಿಯೊಂದು ಹೀಗಿದೆ. ಸೋಮವಾರದ ಬೇರು ಅಥವಾ ಅಗಳು ಶುಂಠಿ (*Zingiber casumunar*) ಯನ್ನು ನೀರಿನಲ್ಲಿ ತೇದು ನೆಕ್ಕಿಸಿದರೆ, ವಾಂತಿ ಅಥವಾ ಬೇದಿ ಆಗಿ ವಿಷ ಇಳಿಯುತ್ತದೆ. ಅನಂತರ ಅದೇ ಬೇರನ್ನು ತೇದು ಹಾವು ಕಚ್ಚಿದ ಜಾಗಕ್ಕೆ ಹಚ್ಚುತ್ತಾರೆ.



ಕುರ

ಮೈ-ಕೈಯಲ್ಲಿ ಏಳುವ ಕುರದ ನೋವು, ಸೆಳೆತಕ್ಕೆ ಒದ್ದಾಡುವಾಗ ಏನಪ್ಪಾ ಮಾಡುವುದು ? ಅಗಳು ಶುಂಠಿ (*Zingiber casumunar*) ಯನ್ನು ನಿಂಬೆ ಹಣ್ಣಿನಲ್ಲಿ ತೇದು ಅಕ್ಕಿ ತೊಳೆದ ನೀರಿನಲ್ಲಿ ಕಲಸಿ ಕುರಕ್ಕೆ ಹಚ್ಚಿದರೆ ಕುರ ಮಾಗಿ ಒಡೆದು ಗುಣವಾಗುವುದಂತೆ.

ಹಲ್ಲುನೋವು

ನೆಕ್ಕಿ ಸೊಪ್ಪಿನ ಗಿಡ (*Vitex negundo*) ದ ಕುಡಿಯನ್ನು ಕತ್ತರಿಸಿ, ಜಜ್ಜಿ ಉಪ್ಪು ಸೇರಿಸಿ ಇಟ್ಟರೆ, ಹಲ್ಲು ನೋವು ಕಡಿಮೆಯಾಗುತ್ತದೆ.

ಮಾಹಿತಿ : ಶುಂಠಿಕಟ್ಟೆ ಮಹಾಬಲಗೌಡ
ಸಂಗ್ರಹ : ಸುಶೀಲಾ ವೆಂಕಟೇಶ್, ಯಲಹಂಕ.

ಅಲರ್ಜಿಯೇ ?

ಕೆರೆ, ಕಟ್ಟೆಗಳ ನೀರಿನಿಂದ ತೀಟಗಂದೆ ಮನುಷ್ಯರಿಗೆ ಬರುವುದು ಸಹಜ. ಚರ್ಮದ ಮೇಲೆ ಗಂದೆ ಎದ್ದು, ಕಡಿತ, ಉರಿ ಕಂಡು ಬರುವುದು. ಬೆಳಿಗ್ಗೆ, ಸಾಯಂಕಾಲ ಮೂರು ಎಲೆ ದೊಡ್ಡಪತ್ರೆ ರಸವನ್ನು ಗಂದೆ ಕಾಣುವ ಭಾಗಕ್ಕೆ ಹಚ್ಚಿದರೆ ಗುಣವಾಗುವುದು. ಎಲೆಯನ್ನು ಸ್ವಲ್ಪ ಭಾಗ ತಿಂದರೂ ಒಳ್ಳೆಯದು. ಮನುಷ್ಯರಿಗೆ ಈ ಗಂದೆ ಬಾಧೆ ಬರುವುದಲ್ಲದೆ ಕೆರೆ ನೀರಿನಲ್ಲಿ ದನಗಳ ಮೈ ತೊಳೆದಾಗ ದನಗಳಿಗೂ ಬರುತ್ತದೆ. ದನಗಳಿಗೂ ದೊಡ್ಡಪತ್ರೆ ಎಲೆಗಳನ್ನು ಮೇವಿನೊಡನೆ ತಿನ್ನಿಸಿದರೆ ಗುಣವಾಗುತ್ತದೆ.

- ಬಿ. ಬಸವರಾಜು, ಸಂತೇಶಿವರ್

ಕೆಮ್ಮು ಗುಣವಾಗಲು ಕೆಲವು ಔಷಧಿಗಳು

★ ಕರಿಮೆಣಸು ಉಪ್ಪಿನೊಂದಿಗೆ ಪುಡಿಮಾಡಿ ಕೆಮ್ಮು ಬಂದಾಗ ಬಾಯಿಗೆ ಹಾಕಿಕೊಳ್ಳುವುದರಿಂದ ನುಸಿಕೆಮ್ಮು ನಿವಾರಣೆಯಾಗುವುದು.

★ ಹುರಿ ಕಡಲೆಯೊಂದಿಗೆ ಐದು ಕರಿಮೆಣಸು ಮತ್ತು ಉಪ್ಪು ಸೇರಿಸುತ್ತಾ ತಿನ್ನುವುದರಿಂದ, ಉಷ್ಣಕ್ಕೆ ಗಂಟಲಲ್ಲಿನ ಕಫವು ಕರಗಿ ಕೆಮ್ಮು ನಿವಾರಣೆಯಾಗುವುದು. ಇದರೊಂದಿಗೆ ಹಸಿ ಬೆಳ್ಳುಳ್ಳಿ ಸೇರಿಸಿ ತಿಂದರೆ ಅತಿಬೇಗ ಕೆಮ್ಮು ನಿವಾರಣೆಯಾಗುವುದು. ನಾಲ್ಕೈದು ದಿನ ಮಲಗುವ ಮುನ್ನ ತಿಂದು, ನೀರು ಕುಡಿಯದೇ ಮಲಗಿದರೆ ಬೇಗ ಗುಣ ಕಂಡುಬರುವುದು.

ತಲೆಹೊಟ್ಟು ನಿವಾರಣೆ

ತಲೆಹೊಟ್ಟಿನಿಂದ ಅತಿಯಾದ ಕೂದಲು ಉದುರುತ್ತಿದ್ದರೆ ಟೀಯ ಡಿಕಾಕ್ಷನ್, ಸೀಗೇಪುಡಿ ಅಥವಾ ಶಾಂಪೂವಿನೊಂದಿಗೆ ಸೇರಿಸಿ ತಲೆ ಸ್ನಾನ ಮಾಡುವುದರಿಂದ ತಲೆಹೊಟ್ಟು ಕ್ರಮೇಣ ಕಡಿಮೆಯಾಗುವುದು.

ಮೆಂತ್ಯದ ಕಾಳನ್ನು ನೀರಿನಲ್ಲಿ ನೆನೆಸಿ ರುಬ್ಬಿ ಬರುವ ಪೇಸ್ಟನ್ನು ತಲೆಗೆ ಹಚ್ಚಿಕೊಂಡು ಅರ್ಧಗಂಟೆಯ ನಂತರ ತಲೆಸ್ನಾನ ಮಾಡುವುದರಿಂದ ತಲೆಹೊಟ್ಟು ನಿವಾರಣೆಯಾಗುವುದು.

ಮಜ್ಜಿಗೆಯನ್ನು ತಲೆಗೆ ಹಚ್ಚಿಕೊಂಡು ಅರ್ಧ ಗಂಟೆಯ ನಂತರ ಸ್ನಾನ ಮಾಡುವುದರಿಂದ ತಲೆಹೊಟ್ಟು ನಿವಾರಣೆ ಆಗುವುದು. ಹುಳಿ ಮೊಸರು ಅಥವಾ ಮಜ್ಜಿಗೆ ತಲೆಗೆ ತಂಪು ನೀಡಿ ಕೂದಲು ಉದುರುವುದನ್ನು ತಡೆಯುವುದು.

ನಿಂಬೆಹಣ್ಣನ್ನು ಒಂದು ಕೋಳಿ ಮೊಟ್ಟೆಯಲ್ಲಿ ಸೇರಿಸಿ ತಲೆಗೆ ಹಚ್ಚಿಕೊಂಡು ಅರ್ಧತಾಸಿನ ನಂತರ ಸ್ನಾನ ಮಾಡುವುದರಿಂದ ತಲೆಹೊಟ್ಟು ಕಾಣೆಯಾಗುವುದು.

- ಸಂಗ್ರಹ : ಬಿ.ಕೆ. ನಾಗರತ್ನ
ತೃತೀಯ ಕೃಷಿ ವಿದ್ಯಾರ್ಥಿನಿ, ಬೆಂಗಳೂರು

ಆಳಲೇಕಾಯಿ

ಪ್ರಾಚೀನ ಕಾಲದಿಂದಲೂ ಮನೆಮಾತಾಗಿರುವ ಅಶ್ವಗಂಧ (*Withania somnifera*)

ಡಾ|| ವೈ.ಎಸ್. ಸೀತಾರಾಮ ಮತ್ತು ಗುರುರಾಜ್ ಚಳಗೇರಿ

ಪ್ರಾಚೀನ ಕಾಲದಿಂದಲೂ ಮಾನವನು ವನೌಷಧಿ ಸಸ್ಯಗಳನ್ನು ರೋಗಗಳನ್ನು ಗುಣಪಡಿಸಲು ಹಾಗೂ ನೋವು ನಿವಾರಣೆಗೆ ಬಳಸುತ್ತಿದ್ದಾನೆ. ಈ ಗುಣ ಪಡಿಸುವ ಕಲೆಯು ''ಆಯುರ್ವೇದ'' ವೆಂದು ಪ್ರಖ್ಯಾತವಾಗಿದೆ. ಇದು ಭಾರತೀಯ ವೈದ್ಯ ಪದ್ಧತಿಯ ಒಂದು ಅಂಗವೆಂದು ಹೇಳಬಹುದು. ಈ ಭಾರತೀಯ ವೈದ್ಯ ಪದ್ಧತಿಯ ಬೆಳವಣಿಗೆಗೆ ಚರಕ, ಶುಶ್ರುತ ಹಾಗೂ ಮಾಧವ ಎಂಬ ವೈದ್ಯತ್ರಯರು ಕಾರಣಕರ್ತರಾಗಿದ್ದಾರೆ.

ನಮ್ಮ ದೇಶದಲ್ಲಿ 18,000 ಆವೃತ ಬೀಜ ಸಸ್ಯಗಳಿವೆ, ಅವುಗಳಲ್ಲಿ 3000 ಸಸ್ಯಗಳನ್ನು ದೇಶಿಯ ವೈದ್ಯ ಪದ್ಧತಿಯಲ್ಲಿ ಬಳಸುತ್ತಿದ್ದಾರೆ. ಈ ಸಸ್ಯಗಳಲ್ಲಿ ಅಶ್ವಗಂಧವು ಒಂದು. ಇದನ್ನು ಭಾರತೀಯ ''ಜಿನ್ಸೆಂಗ್'' ಎಂದು ಕರೆಯುತ್ತಾರೆ. ನಮ್ಮ ವೇದ ಉಪನಿಷತ್ತುಗಳ ಕಾಲದಿಂದಲೂ ಅಶ್ವಗಂಧವನ್ನು ಮನೆ ಮದ್ದಾಗಿ ಉಪಯೋಗಿಸಿದ ಉಲ್ಲೇಖವಿದೆ. ಇದರ ಉಪಯೋಗವನ್ನು ಯಜುರ್ವೇದ, ಅಥರ್ವಣವೇದ ಹಾಗೂ ಋಗ್ವೇದಗಳಲ್ಲಿ ಕಾಣಬಹುದು. ಈ ಸಸ್ಯವನ್ನು ಆಯುರ್ವೇದ ಪದ್ಧತಿಯಲ್ಲಿ ''ರಸಾಯನ'' ಮತ್ತು ''ವಾಜಿಕರಣ'' ವರ್ಗದಲ್ಲಿ ಸೇರಿಸಲಾಗಿದೆ, ಕಾರಣ ಈ ಬೇರು ''ಶಕ್ತಿವರ್ಧಕ'' ಗುಣವನ್ನು ಹೊಂದಿದೆ ಈಗಲೂ ಸಹ ಇದು ''ಸರ್ವರೋಗ ನಿವಾರಣ'' ಸಸ್ಯವೆಂದು ಪ್ರಖ್ಯಾತ ಗೊಂಡಿದೆ. ಈ ಸಸ್ಯದ ಮಹತ್ವವನ್ನು 'ಶುಶ್ರುತ ಸಂಹಿತ' ದಲ್ಲಿ ಈ ರೀತಿ ಕಾಣುತ್ತೇವೆ.

ಶತಾವರೀ ಮಾಶ್ವಗಂಧಾಯಂ ಶತಾಪುಷ್ಪಾಂ ಪುರ್ನರ್ನಾವಾಮ್ ।

ತತ್ಸಾಧು ಸಿದ್ಧಂ ಸೌವರರ್ಣೇ ರಾಜತೇ ಮೃಣ್ಮಯೇಪಿ ವಾಮ್ ॥

ಅಶ್ವಗಂಧವು ಭಾರತದ ಎಲ್ಲಾ ಒಣ ಹವೆಯ ಪ್ರದೇಶಗಳಲ್ಲಿ ವಿತರಣೆಗೊಂಡಿದೆ. ಈ ಸಸ್ಯವು ಬೀಳು ಭೂಮಿಯಲ್ಲಿ ಕಸದ ರೂಪವಾಗಿ ಬೆಳೆದು ನಿಲ್ಲುತ್ತದೆ. ಈ ಪ್ರಭೇಧದಲ್ಲಿ ಹಲವಾರು ಮೇಲ್ಮೈ ಲಕ್ಷಣಗಳ ಸಸ್ಯಗಳಿವೆ.

ಈ ಸಸ್ಯವು ರೋಮಗಳಿಂದ ಕೂಡಿದ ಬಹುವಾರ್ಷಿಕ ಸಸ್ಯ. ಎಲೆಗಳು ಸರಳ ಹಾಗು ದಂಡಾಕೃತಿಯಿಂದ ಕೂಡಿರುತ್ತದೆ: ಪುಷ್ಪಗಳು ದ್ವಿಲಿಂಗದಿಂದಿದ್ದು : (ಗಂಡು ಹಾಗೂ ಹೆಣ್ಣು ಅಂಗಗಳು ಒಂದೇ ಪುಷ್ಪದಲ್ಲಿ ಗೋಚರಿಸುತ್ತವೆ), ಹಸಿರು ಮಿಶ್ರಿತ ಬಿಳಿ ಬಣ್ಣವಿದ್ದು ಗೊಂಚಲಿನಿಂದ ಕೂಡಿರುತ್ತವೆ. ಹಣ್ಣುಗಳು ಕಡಲೆ ಕಾಳಿನ ಗಾತ್ರವಿದ್ದು; ಬೇರುಗಳು ಬಿಳಿ ಬಣ್ಣವನ್ನು ಹೊಂದಿದ್ದು ಕುದುರೆ ಮೂತ್ರದ ವಾಸನೆ ಹೊಂದಿರುತ್ತವೆ.

ಈ ಸಸ್ಯವು ಭಾರತದ ಹಲವಾರು ಪ್ರದೇಶಗಳಲ್ಲಿ ಬೆಳೆಯುವುದರಿಂದ ಆಯಾ ಪ್ರದೇಶಗಳಲ್ಲಿ ಈ ಸಸ್ಯ ವಿಶಿಷ್ಠ ಹೆಸರಿನಿಂದ ಕರೆಯಲ್ಪಡುತ್ತದೆ.

ಆಸ್‌ಗಂಧ್ (ಹಿಂದಿ), ಅಶ್ವಗಂಧ (ಸಂಸ್ಕೃತ), ಹಿರೇ ಮದ್ದಿನ ಗಿಡ, ಹಂಗರಿಗಿನ ಬೇರು (ಕನ್ನಡ), ಅಸ್ ಕಂದಾ (ಮರಾಠಿ), ಅಮುಕ್ಕಿ(ತಮಿಳು), ಆಮುಕ್ಕಿರಮ್ (ಮಲೆಯಾಳಿ)

ಬೇರಾವ ಸಸ್ಯವೂ ಬೆಳೆಯದಂತಹ, ಪಾಳು ಭೂಮಿಯಲ್ಲಿ ಈ ಸಸ್ಯವನ್ನು ಬೆಳೆಯಬಹುದು. ಈ ಸಸ್ಯವನ್ನು ಮಧ್ಯ ಪ್ರದೇಶದ ಮಂಡಸೂರ್ ಜಿಲ್ಲೆ ನಾಗೂರಿ, ಹಾಗೂ ಗರ್ ವಾಲ್ ಗುಡ್ಡ ಪ್ರದೇಶದಲ್ಲಿ ವಾಣಿಜ್ಯ ಬೆಳೆಯನ್ನಾಗಿ ಬೆಳೆಯುತ್ತಾರೆ.

ಸಸ್ಯದ ಬೇರುಗಳು ಶಕ್ತಿವರ್ಧಕ, ಕಾಮೋತ್ತೇಜಕ, ತೊನ್ನು ಹಾಗೂ ಉಬ್ಬಸಕ್ಕೆ ಉಪಯೋಗಿಸುತ್ತಾರೆ.

ಇದು ದೇಹದ ಪುಷ್ಟಿತನಕ್ಕೆ ತುಂಬಾ ಯೋಗ್ಯಕರ

(ಚರಕ ಸಂಹಿತಾ, ಸೂತ್ರ, 4,9,10)

ಬೇರುಗಳು ಗಾಯ ಹಾಗೂ ಹುಣ್ಣುಗಳನ್ನು ವಾಸಿಮಾಡಲು ಸಹಾಯಕವಾಗಿವೆ.

(ಚರಕ ಸಂಹಿತಾ, ಸೂತ್ರ, 37,23)

ಬೇರಿನ ಕಷಾಯ ವಾಂತಿ ಬರಿಸಲು ಸಾಹಾಯ ಮಾಡುತ್ತದೆ.

(ಶುಶ್ರುತ ಸಂಹಿತ ಸೂತ್ರ, 39,3)

ಕಿವಿ ಹಾಲೆ (ರಂದ್ರ)ಗೆ, ಕೀವು ಮುಂತಾದ ಸೋಂಕು ತಗುಲಿದರೆ ಇದರ ಬೇರಿನ ಎಣ್ಣೆಯು ಬಹಳ ಯೋಗ್ಯ.

(ಶುಶ್ರುತ ಸಂಹಿತಾ, ಚಿಕಿತ್ಸಾ 25,26)

ವಿಥಾಫೆರಿನ್ - ಎ ಎಂಬ (ಆಲ್ಕಲಾಯಿಡ್) ರಸಾಯನಿಕವನ್ನು ಈ ಸಸ್ಯದಿಂದ ಬೇರ್ಪಡಿಸುತ್ತಾರೆ. ಈ ರಾಸಾಯನಿಕವು ರೋಗ ನಿರೋಧಕ ಹಾಗೂ ಗಡ್ಡೆಗಳನ್ನು ಕರಗಿಸಲು ತುಂಬಾ ಸಹಾಯಕವಾಗಿದೆ.

ಅಶ್ವಗಂಧದ ಬಲಿತ ಬೇರು (6 ರಿಂದ 7 ಸೆಂ.ಮಿ.ವ್ಯಾಸ) ಗಳಿಗೆ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ. ಗೆ 80-90 ರೂ. ನಷ್ಟು ಬೆಲೆ ಇದೆ. ಇದಲ್ಲದೆ ಈ ಬೇರುಗಳಿಗೆ ಪ್ರಚಲಿತ ಔಷಧ ತಯಾರಕರಾದ ಡಾಬರ್, ಚರಕ, ಮಹರ್ಷಿ ಆಯುರ್ವೇದ, ಹಿಮಾಲಯ, ಝಂಡು ಫಾರ್ಮ, ಬೈಧ್ಯನಾಥ್ ಹಾಗೂ ಇನ್ನೂ ಹಲವು ಔಷಧೀಯ ಉತ್ಪಾದಕ ಘಟಕಗಳಿಂದ ಅಪಾರ ಬೇಡಿಕೆ ಇದೆ. ಈ ಘಟಕಗಳಲ್ಲಿ ಇದರ ಬೇರನ್ನು ಔಷಧ ತಯಾರಿಕೆಯಲ್ಲಿ ಒಂದು ಮುಖ್ಯ ಪದಾರ್ಥವಾಗಿ ದೊಡ್ಡ ಪ್ರಮಾಣದಲ್ಲಿ ಬಳಸುತ್ತಿದ್ದಾರೆ.

ಸಸ್ಯದ ಹೆಚ್ಚಿನ ಬೇಸಾಯದ ವಿವರಳಿಗೆ ಇವರನ್ನು ಸಂಪರ್ಕಿಸಿ
ಡಾ. ವೈ.ಎಸ್. ಸೀತಾರಾಮ , ಸಸ್ಯಶಾಸ್ತ್ರ ವಿಭಾಗ,
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗ - 585 106.

ನಮ್ಮ ಯೋಜನೆಗಳು ಎತ್ತಸಾಗುತ್ತಿವೆ ... ?

ಗುರುರಾಜ ಬುಧ್ಯ

ಕರ್ನಾಟಕ ಪೂರ್ವ ಬಯಲು ಪ್ರದೇಶದ ಅರಣ್ಯ ಮತ್ತು ಪರಿಸರ ಯೋಜನೆ. ಜಪಾನ್ ದೇಶದಿಂದ ಶೇಕಡಾ 2.1 ರಂತೆ ಬಡ್ಡಿಯ ದರದ ಮೇಲೆ 566.56 ಕೋಟಿ ರೂಪಾಯಿ ಸಾಲ ಪಡೆದು 1997 ರಿಂದ ಆರಂಭಿಸಿದ ಯೋಜನೆ ಇದು. 30 ವರ್ಷದಲ್ಲಿ ಈ ಸಾಲವನ್ನು ಹಿಂತಿರುಗಿಸುವ ಒಪ್ಪಂದ.

ಈ ಯೋಜನೆಯಂತೆ 17 ಜಿಲ್ಲೆಗಳ 138 ತಾಲ್ಲೂಕುಗಳಲ್ಲಿ ಸುಮಾರು 4,70,500 ಹೆಕ್ಟೇರ್ ಪ್ರದೇಶದಲ್ಲಿ ಮರಗಿಡ ಬೆಳೆಸಿ, ಮಣ್ಣು ಸಂರಕ್ಷಣೆ ಮಾಡುವ ಯೋಜನೆ. ಇದರಲ್ಲಿ 3,00,000 ಹೆಕ್ಟೇರ್ ಪ್ರದೇಶ ಖಾಸಗಿ ಭೂಮಿ. ಇನ್ನುಳಿದ 1,70,500 ಹೆಕ್ಟೇರ್ ಮಾತ್ರ ಕಾಯ್ದಿಟ್ಟ ಅರಣ್ಯ ಪ್ರದೇಶ, ಸರಕಾರಿ ಭೂಮಿ. ಒಟ್ಟಾರೆ ರೈತರಿಗಾಗಿ, ರೈತರ ಭೂಮಿಯಲ್ಲೇ ನಡೆಸಬೇಕಾದ ಈ ಯೋಜನೆಯ ಪರಿಣಾಮ, ಅದರಲ್ಲಿ ಜನರ ಭಾಗವಹಿಸುವಿಕೆ ಬಗ್ಗೆ ಫೆಬ್ರವರಿ 20-21, 1998 ರಂದು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಬೆಗಟೇರಿಯಲ್ಲಿ ಈ ಯೋಜನೆಯ ವ್ಯಾಪ್ತಿಯಡಿಯಲ್ಲಿ ಬರುವ ಜಿಲ್ಲೆಗಳಲ್ಲಿನ ಸ್ವಯಂಸೇವಾ ಸಂಸ್ಥೆಗಳು ಕಾರ್ಯಾಗಾರ ನಡೆಸಿ ಕೆಲವು ನ್ಯೂನತೆಗಳನ್ನು, ಸುಧಾರಣೆಗಳನ್ನು ಸೂಚಿಸಿತು. ಅದರ ಸಾರಾಂಶ ಹೀಗೆ :

ಈ ಯೋಜನೆಯ ಸಿಂಹಪಾಲು ಹಣ ಕಟ್ಟಡಕ್ಕೆ, ಸಾಧನ ಸಲಕರಣೆಗಳಿಗೆ, ವಾಹನಗಳ ವೆಚ್ಚಕ್ಕೆ, ಯಂತ್ರ, ಕಂಪ್ಯೂಟರ್ಸ್, ವಿದೇಶದಲ್ಲಿ ತರಬೇತಿಗೆ ತೆಗೆದಿರಿಸಲಾಗಿದೆ. ಸಾಲವೆಂದು ಪಡೆದ ಹಣದಲ್ಲಿ ಈ ದುರ್ವಿನಿಯೋಗ ಎಷ್ಟು ಸರಿ ?

ಕಡುಬಡವರಿಗೆ ಖಾಯಂ ಮತ್ತು ತಾತ್ಕಾಲಿಕ ಉದ್ಯೋಗ ದೊರಕಿಸಿಕೊಡುವ ಪ್ರಸ್ತಾಪ ಮಾತ್ರವಿದ್ದು, ಅದರ ಕಾರ್ಯಾಚರಣೆ ತರುವ ಸೂಚನೆಗಳು ಹೆಚ್ಚಿಲ್ಲ. ಸ್ಥಳೀಯ ಜನರಿಗೆ ಅಗತ್ಯವಾದ ಪಶುಸಂಗೋಪನೆಗೂ ಯಾವ ಆದ್ಯತೆ ನೀಡಿಲ್ಲ.

ಗುರುತಿಸಿದ 17 ಜಿಲ್ಲೆಗಳ ಪ್ರದೇಶ, ಹವಾಮಾನ, ಮಣ್ಣು ಬೇರೆ ಬೇರೆಯಾಗಿದ್ದು ಏಕ ಜಾತಿಯ ನೆಡು ತೋಪುಗಳು ಸೂಕ್ತವಲ್ಲ. ಬದಲಿಗೆ, ಜೀವ ವೈವಿಧ್ಯತೆಯ ಅರಣ್ಯ, ಸಾಂಪ್ರದಾಯಿಕ ಅರಣ್ಯ, ಕಡಿಮೆ ಜನರನ್ನು ಬಳಸಿ ಸ್ವಾಭಾವಿಕವಾಗಿ ಅರಣ್ಯ ಬೆಳೆಸಬಲ್ಲ ತಾಂತ್ರಿಕ ಯೋಜನೆಗಳು ಅವಶ್ಯಕ.

ಸಾಮಾಜಿಕ ಅರಣ್ಯ ಯೋಜನೆಗಳು ಸಫಲವಾಗಬೇಕಾದರೆ. ಸ್ಥಳೀಯ ಜನರ ಭಾಗವಹಿಸುವಿಕೆ ಅತೀ ಅಗತ್ಯ. ಸ್ಥಳೀಯರ ಬೇಡಿಕೆ ಪೂರೈಸದ, ಅವರ ಅಗತ್ಯತೆಗೆ ಸ್ಪಂದಿಸದ ಯೋಜನೆಗಳು ಸಾಫಲ್ಯತೆ ಹೊಂದುವುದಾದರೂ ಹೇಗೆ ? ಈ ನಿಟ್ಟಿನಲ್ಲಿ ಕರ್ನಾಟಕ ಅರಣ್ಯ ಇಲಾಖೆ ಗಮನಹರಿಸಿ, ಯೋಜನೆಯನ್ನು ಜನಪರ ಮಾರ್ಗದಲ್ಲಿ ಕಾರ್ಯರೂಪಕ್ಕೆ ತರುವುದು ಅತ್ಯಗತ್ಯ.

ನರ್ಮದಾದಂಥ ಯೋಜನೆಗಳಿಂದ ನಿಜ ಅಭಿವೃದ್ಧಿ ಸಾಧ್ಯವೇ ?

ನರ್ಮದಾ ನದಿಗೆ ಅಡ್ಡಲಾಗಿ ಅನೇಕ ದೊಡ್ಡ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಅಣೆಕಟ್ಟುಗಳನ್ನು ಕಟ್ಟಲು 1982 ರಲ್ಲಿ ಕೇಂದ್ರ ಸರ್ಕಾರ ಗುಜರಾತ್ ಮತ್ತು ಮಹಾರಾಷ್ಟ್ರ ಸರ್ಕಾರಗಳಿಗೆ ಅನುಮತಿ ನೀಡಿತು. ಸರ್ದಾರ್ ಸರೋವರ್ ಮತ್ತು ನರ್ಮದಾ ಸಾಗರ್ ಅಣೆಕಟ್ಟುಗಳು ಇವುಗಳಲ್ಲಿ ಮುಖ್ಯವಾದವು. ಈ ಅಣೆಕಟ್ಟುಗಳ ನಿರ್ಮಾಣ ನರ್ಮದಾ ತೀರಪ್ರದೇಶದಲ್ಲಿ ಬದುಕುವ 200 ಲಕ್ಷಕ್ಕೂ ಹೆಚ್ಚು ಜನರ ಬದುಕನ್ನು ಬಾಧಿಸುತ್ತಿತ್ತು. ಬಹುತೇಕ ಆದಿವಾಸಿ ಮತ್ತು ದಲಿತ ಸಮುದಾಯಗಳಿಗೆ ಸೇರಿದ 100 ಲಕ್ಷ ಜನರ ಎಂತ್ತಂಗಡಿ ಯಾಗುತ್ತಿದ್ದರು. 25 ಸಾವಿರ ಹೆಕ್ಟೇರ್ ಅರಣ್ಯ ಭೂಮಿ ಮತ್ತು 2 ಲಕ್ಷ ಹೆಕ್ಟೇರ್ ಕೃಷಿಭೂಮಿಯ ಮುಳುಗಡೆಯಾಗುತ್ತಿತ್ತು. ಊಹಿಸಲಸಾಧ್ಯ ಪ್ರಮಾಣದ ವನ್ಯಜೀವಿ ಮತ್ತು ಅಮೂಲ್ಯ ಸಸ್ಯ ಪ್ರಭೇದಗಳ ನಾಶವಾಗಿ ನದಿ ಮುಖಜ ಪರಿಸರ ವ್ಯವಸ್ಥೆ ಅಲ್ಲೋಲ ಕಲ್ಲೋಲವಾಗುತ್ತಿತ್ತು. 1986 ರಲ್ಲಿಯೇ ಪರಿಸರ ಮತ್ತು ಅರಣ್ಯ ಇಲಾಖೆಯು ಈ ಯೋಜನೆಯಿಂದ 40 ಸಾವಿರ ಕೋಟಿ ಮೌಲ್ಯದ ಪರಿಸರ ನಾಶವಾಗುತ್ತದೆಂದು ಅಂದಾಜು ಮಾಡಿತ್ತು.

ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಪರಿಸರ ನಾಶ ಮತ್ತು ಜನಜೀವನದ ನಾಶಕ್ಕೆ ಮುಂದಾದ ಇಂತಹ ಅಭಿವೃದ್ಧಿ ಯೋಜನೆಯ ವಿರುದ್ಧ ನರ್ಮದಾ ಬಚಾವೋ ಆಂದೋಲನ ಉಗ್ರಹೋರಾಟ ಕೈಗೊಂಡಿತು. ಅಂದೋಲನ 1994 ರಲ್ಲಿ ಸಲ್ಲಿಸಿದ ರಿಟ್ ಮೇರೆಗೆ ಉಚ್ಛನ್ಯಾಯಾಲಯ 1995 ರ ನಲ್ಲಿ ಆಜ್ಞೆಯನ್ನು ಹೊರಡಿಸಿ ಅಲ್ಲಿಂದ ಆಚೆಗೆ ಅಣೆಕಟ್ಟಿನ ನಿರ್ಮಾಣವನ್ನು ಸಂಪೂರ್ಣ ನಿಲ್ಲಿಸಲಾಯಿತು. ಆದಾಗ್ಯೂ 1999 ಫೆಬ್ರವರಿ 18 ರಂದು 1994 ರಲ್ಲಿ ಆಂದೋಲನ ಸಲ್ಲಿಸಿದ್ದ ರಿಟ್‌ನ ಅಂತಿಮ ವಿಚಾರಣೆಯನ್ನು ನಡೆಸಿ ಉಚ್ಚನ್ಯಾಯಾಲಯ ಮಧ್ಯಂತರ ಆಜ್ಞೆ ಹೊರಡಿಸಿದೆ. ಸರ್ದಾರ್ ಸರೋವರ ಅಣೆಕಟ್ಟಿನ ಎತ್ತರವನ್ನು 80.3 ಮೀಟರ್‌ನಿಂದ 85 ಮೀಟರ್‌ಗಳಿಗೆ ಏರಿಸಲು ಗುಜರಾತ್ ಸರ್ಕಾರಕ್ಕೆ ಅನುಮತಿ ನೀಡಿದೆ.

ಅಣೆಕಟ್ಟನ್ನು 85 ಮೀಟರ್‌ಗಳಿಗೆ ಏರಿಸುವುದರ ತೀವ್ರ ಪರಿಣಾಮಕ್ಕೆ ಒಳಗಾಗುವವರು ನದೀ ತೀರ ಪ್ರದೇಶದ ಆದಿವಾಸಿಗಳು. ಅವರ ಪುನರ್ವಸತಿಗೆ ಸರಿಯಾದ ಜಾಗ ಲಭ್ಯವಿಲ್ಲ. ನರ್ಮದಾ ಬಚಾವೋ ಆಂದೋಲನದ ಪ್ರಕಾರ ಈಗಿರುವ 80 ಮೀಟರ್ ಅಣೆಕಟ್ಟಿನಿಂದ ಮುಳುಗಡೆಯಾದ ಪ್ರದೇಶದ ಜನರನ್ನೇ ಸಮುದಾಯಗಳಾಗಿ ಪುನರ್ ನೆಲೆಗೊಳಿಸಿಲ್ಲ ಮತ್ತು ಸರ್ಕಾರಿ ನಿಯಮಾನುಸಾರ ಪುನರ್ವಸತಿ ಕಲ್ಪಿಸಿಲ್ಲ. 80 ಅಡಿಗೂ ಕಡಿಮೆ ಎತ್ತರದ ನಿರ್ಮಾಣದಲ್ಲಿ ಸ್ಥಳಾಂತರಿಸಲ್ಪಟ್ಟವರಿಗೆ ಇನ್ನೂ ಬೇಸಾಯಸಾಧ್ಯ ಭೂಮಿ ಸಿಕ್ಕಿಲ್ಲ. ನರ್ಮದಾ ನದಿಯ ಅನೇಕ ಅಣೆಕಟ್ಟುಗಳಿಂದ ಎತ್ತಂಗಡಿಯಾದ ಸಾವಿರಾರು ಕುಟುಂಬಗಳೇ

ಕಳೆದ 20 ವರ್ಷಗಳಿಂದ ಸೂಕ್ತ ಪುನರ್ವಸತಿಗೆ ಕಾಯುತ್ತಿರುವಾಗ ಸರ್ದಾರ್ ಸರೋವರ ಅಣೆಕಟ್ಟಿನ ಬಾಧಿತ ಕುಟುಂಬಗಳಿಗೆ ಪುನರ್ವಸತಿಗೆ ಭೂಮಿ ಸಿಗುವ ಪ್ರಶ್ನೆಯೇ ಇಲ್ಲ. ಈ ರೀತಿಯಾಗಿ ಈಗಾಗಲೇ ಸ್ಥಳಾಂತರಗೊಂಡ ಜನರೇ ವಿಪರೀತ ಸಂಕಷ್ಟದಲ್ಲಿರುವಾಗ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಬೇಕೆಂಬ ನ್ಯಾಯಾಲಯದ ಆಜ್ಞೆ ತೀರಾ ಅಸಮರ್ಥನೀಯ. ಇಂತಹ ಆಜ್ಞೆ ಸ್ಥಳಾಂತರದ ಸಮಸ್ಯೆ ಮತ್ತು ಅದಕ್ಕೆ ಕಾರಣವಾದ ಆಣೆಕಟ್ಟುಗಳ ನಡುವಿನ ಪರಸ್ಪರ ಸಂಬಂಧವನ್ನೇ ತೆರೆಮರೆಗೆ ಸರಿಸಿಬಿಡುತ್ತದೆ. ನರ್ಮದಾಬಚಾವೋ ಆಂದೋಲನವು ಆಣೆಕಟ್ಟು ನಿರ್ಮಾಣ ಮತ್ತು ಸ್ಥಳಾಂತರದ ಸಮಸ್ಯೆಗಳ ನಡುವಿನ ಸಂಬಂಧವನ್ನೇ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಇವೆರಡನ್ನು ಪ್ರತ್ಯೇಕಿಸಿ ನೋಡಲಾಗದೆಂದು ಪ್ರತಿಪಾದಿಸಿದೆ.

ನರ್ಮದಾ ಕಣಿವೆಯಲ್ಲಿನ ಸ್ಥಳಾಂತರ ಇಲ್ಲಿಯವರೆಗೂ ಜನರ ಸ್ವಾತಂತ್ರ್ಯದ ಹಕ್ಕು, ಮಾಹಿತಿಯ ಹಕ್ಕು ಮತ್ತು ಭಾಗವಹಿಕೆಯ ಹಕ್ಕುಗಳನ್ನು ಇಡಿಯಾಗಿ ತಳ್ಳಿಹಾಕಿದೆ. ಭೂಸ್ವಾಧೀನ ಕಾಯಿದೆಯ ಕನಿಷ್ಠ ಅವಶ್ಯಕತೆಗಳನ್ನು ಅನುಸರಿಸಿಲ್ಲ. ಸ್ಥಳಾಂತರ ಜನರ ಸಹಜ ಆಯ್ಕೆಯಂತೂ ಖಂಡಿತಾ ಅಲ್ಲ.

ಕೃಪೆ : ಜನಾಂದೋಲನಗಳ ರಾಷ್ಟ್ರೀಯ ಸಮನ್ವಯ - ಕರ್ನಾಟಕ

ರೇಷ್ಮೆ ಕೃಷಿಗೆ ದೇಶಿಯ ತಿರುವು

- ಬಂದಗದ್ದೆ ರಾಧಾಕೃಷ್ಣ, ಸಾಗರ

ಸುಮಾರು 60 ಎಕರೆ ಭೂಮಿಯಲ್ಲಿ ರೇಷ್ಮೆ ಬೆಳೆದು ಗೂಡು ತೆಗೆಯುವುದೆಂದರೆ ಸಾಧಾರಣ ವಿಷಯವಲ್ಲ. ಮಲೆನಾಡಿನಲ್ಲಿ ಮಳೆಗಾಲದಲ್ಲಿ ರೇಷ್ಮೆ ಬೆಳೆಯಲಾಗುವುದಿಲ್ಲ ಎಂದು ಕೈಬಿಟ್ಟವರು ಅನೇಕರು. ಇಂತ ಮಲೆನಾಡಿನ ತಾಲ್ಲೂಕು ಕೇಂದ್ರ ಸಾಗರದ ಸಮೀಪ ಸಾಗರದಿಂದ ಮಂಗಳೂರಿಗೆ ಹೋಗುವಾಗ 3 ಕಿ.ಮಿ. ಸಾಗಿ ಎಡಕ್ಕೆ ತಿರುಗಿದರೆ ಸಿಗುವ ಸಾಗರ ಫಾರಂನಲ್ಲಿ ಚಂದ್ರು ವರ್ಷದ ಎಲ್ಲಾ ಕಾಲ 60 ಎಕರೆ ಭೂಮಿಯಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೆ.

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆಯುವಾಗ ಸಾಂಪ್ರದಾಯಿಕ ವಿಧಾನ ಅನುಸರಿಸುವುದು ಅಸಾಧ್ಯವಾಯಿತು. ಹೊರಜಗತ್ತಿನ ಆಗು ಹೋಗುಗಳನ್ನು ಸದಾ ಗಮನಿಸುವ ಚಂದ್ರು ಜಪಾನಿನ ರೇಷ್ಮೆ ಕೃಷಿ ವಿಧಾನದ ಬಗ್ಗೆ ಓದಿದರು. ಹೊಸ ಹೊಳಹು. ತಕ್ಷಣ ಕಾರ್ಯಪ್ರವೃತ್ತರಾದರು, ಯಶಸ್ಸು ಕಂಡರು.

ಹೊಸ ವಿಧಾನ ಯಾವುದು ?

ಎಲೆಕೊಯ್ಯುವುದು ಬಿಟ್ಟರು. ಕಡ್ಡಿಗಳನ್ನೇ ಕತ್ತರಸಿ ಹಾಕಿದರು. ಅರ್ಧ ಕೂಲಿ ಕೆಲಸ ಕಡಿಮೆ. ಸೊಪ್ಪನ್ನು ಒಣಗಿಸಿ ಹಾಕುವ ಬದಲು ಒದ್ದೆ ಸೊಪ್ಪನ್ನೇ ಹಾಕಿದರು. 80 ಮೊಟ್ಟೆ ಬೆಳೆಗೆ ಈ ಪ್ರಯೋಗ. ಮಾಮೂಲಿಗಿಂತ ಒಳ್ಳೇ ಫಲಿತಾಂಶ. ಈ ಪ್ರಯೋಗದಿಂದ ಮಲೆನಾಡಿನಲ್ಲಿ ಮಳೆಗಾಲದಲ್ಲೂ ರೇಷ್ಮೆ ಬೆಳೆ ತೆಗೆಯಬಹುದೆಂದು ತಿಳಿಯಿತು.

ಹಣ್ಣಾದ ಹುಳುಗಳನ್ನು ಆರಿಸಲಿಲ್ಲ. ಹುಳುಗಳು ಹಣ್ಣಾಗುತ್ತಿದ್ದಂತೆ ಪ್ಲಾಸ್ಟಿಕ್ ಜಾಲರಿಗಳನ್ನು ರ್‍ಯಾಕಿನ ಮೇಲೆ ಇಡುವುದು. ಅವುಗಳಲ್ಲಿ ಹುಳುಗಳು ಗೂಡು ಕಟ್ಟಕೊಳ್ಳುತ್ತವೆ. ಆರಿಸುವಾಗ ನಮ್ಮ ಉಗುರು ತಾಗಿ ಗಾಯಗಳಾಗಿ ಹುಳುಗಳಿಗೆ ರೋಗ ಬರುತ್ತದೆಂದು ಚಂದ್ರು ಹೇಳುತ್ತಾರೆ.

ಗಂಟೆ ಗಂಟೆಗೆ ಸೊಪ್ಪು ಹಾಕೋ ಅವಶ್ಯಕತೆ ಇಲ್ಲ. ದಿನಕ್ಕೆ ಎರಡು ಬಾರಿ ತೆನಿಕೆಗಳನ್ನಿಟ್ಟರೆ ತಿಂದು ಸುಖವಾಗಿ ಬೆಳೆಯುತ್ತದೆ.

ಹುಳುಸಾಕಾಣಿಕೆಗೆ ಭರ್ಜರಿ ಮನೆಗಳು ಬೇಕಿಲ್ಲ. ವೃಥಾ ಹಣ ವ್ಯಯ. ಕಂಬ, ಹುಲ್ಲು ಛಾವಣಿ, ಸುತ್ತ ಸೊಳ್ಳೆಪರದೆ. ಊಜಿ ನೊಣಗಳು ಒಳಬಾರದಂತೆ ಬಂದೋಬಸ್ತಿ. ಚಂದ್ರು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ರಬ್ಬರ್ ತೋಟದ ಕೆಳಗೆ ಗಳಗಳಿಂದಲೇ ಮನೆಯಾಕಾರದ ಅಸ್ತಿಪಂಜರ ಮಾಡಿದರು. ಇದಕ್ಕೆ ಪರದೆ ಬಂದೋಬಸ್ತಿ. ಮಳೆಗಾಲದಲ್ಲಿ ಮೇಲೆ ಅಡಿಕೆ ಸೋಗೆ ಹಾಕಿದರು. ರೇಷ್ಮೆ ಗೂಡು ಬೆಳೆದರು. ಇವೆಲ್ಲ ಕಟ್ಟು ಕತೆಗಳಲ್ಲ. ಸ್ವತಃ ಚಂದ್ರು ಮಾಡಿದ ಪ್ರಯೋಗಗಳು.

ಹಿಪ್ಪು ನೇರಳೆ - ಶೂನ್ಯಕೃಷಿ

ಹುಳುಗಳು ತಿಂದುಳಿದ ಕಡ್ಡಿಗಳು, ಕಾಡಿನ ದರಗು, ಸುತ್ತಲ ಕಸ ಮುಂತಾದವುಗಳನ್ನು ಹಿಪ್ಪುನೇರಳೆ ಗಿಡದ ಬುಡಕ್ಕೆ ಹಾಸಿದರು. ಅವು ಅಲ್ಲೇ ಕೊಳೆತು ಗೊಬ್ಬರವಾದವು. ಹುಲುಸಾಗಿ ಗಿಡ ಬೆಳೆಯಿತು. ಹುಳುಗಳಿಗೆ ರಾಸಾಯನಿಕ ರಹಿತ ಎಲೆಗಳು ಸಿಕ್ಕವು. ನೈಸರ್ಗಿಕ ಎಲೆಗಳಿಂದ ಹುಳುಗಳ ಆರೋಗ್ಯವರ್ಧನೆ. ರಾಸಾಯನಿಕ ಬಳಸಿ ಬೆಳೆದಾಗ ಹೆಚ್ಚು ಜಾಗ್ರತೆ ಬೇಕಾಗುತ್ತದೆ ಎನ್ನುತ್ತಾರೆ. ಚಂದ್ರು.

ಚಂದ್ರು ರೇಷ್ಮೆ ಬೆಳೆ ಪ್ರಾರಂಭಿಸಿ 8-9 ವರ್ಷಗಳಾಗಿವೆ. ಅಪ್ಪ, ಅಜ್ಜನ ಕಾಲದ ಭೂಮಿ ಇವರದಲ್ಲ. ಭೂಮಿ ಖರೀದಿಸಿ ಕೃಷಿ ಪ್ರಾರಂಭಿಸಿದಾಗ ದಿನದಿನಕ್ಕೆ ಹಣ ಒದಗಿಸಲು ಒದ್ದಾಡಿದರು. ರೇಷ್ಮೆ ಬೆಳೆಯಲ್ಲಿ ಹೊಸ ವಿಧಾನಗಳು ಹೊಳೆಯದೇ ಹೋಗಿದ್ದರೆ ಇಷ್ಟರಲ್ಲಿ ಇಂದು ಬಾರಿ ಪಾಪರ್ ಆಗಿರುತ್ತಿದ್ದೆ ಎನ್ನುತ್ತಾರೆ ಚಂದ್ರು.

ಎರೆ ಹುಳು ಕ್ರಾಂತಿಯ ರುವಾರಿ
- ರಾಧಾ ಡಿ. ಕಾಳೇಯವರ

Earthworm - Cindrella of organic farming

ಕೃಷಿಕನಿಗೆ ಎರೆಹುಳುವಿನ ಪರಿಚಯ ಇಂದು ನಿನ್ನೆಯದಲ್ಲ. ಹಸಿರು ರೂವಾರಿಗಳಾದ ಹೈಬ್ರಿಡ್ ತಳಿಗಳು ಮತ್ತು ರಸಗೊಬ್ಬರದ ಅಬ್ಬರದ ಬಳಕೆ ಕ್ರಿಮಿನಾಶಕಗಳೊಡನೆ ಶುರುವಾದಂದಿನಿಂದ ಈ ಭೂಮಿಯ ಜಠರದ ಬಗ್ಗೆ ಲಕ್ಷ್ಯ ಕಡಿಮೆಯಾಯಿತು. ನಮ್ಮಲ್ಲೇ ದೊರಕುವ ಕೃಷಿ ತಾಜ್ಯ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳಿಂದ ಸಿಗುವ ಘನ ಸಾವಯುವ ತ್ಯಾಜ್ಯಗಳ ಸುಲಭ ಮತ್ತು ದಕ್ಷ ಕೊಳೆಯಿಸುವಿಕೆಗೆ ಎರೆಹುಳುಗಳನ್ನು ಬಳಸುವ ಯೋಜನೆ ಬಂತು. ಈ ನಿಟ್ಟಿನಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಪ್ರಾಣಿ ಶಾಸ್ತ್ರ ವಿಭಾಗದಲ್ಲಿ ಮೂರು ದಶಕಗಳ ಕಾಲ ನಡೆಸಿದ ಸಂಶೋಧನೆಯ ಫಲ ಈ ಪುಸ್ತಕ.

ಈ ಪುಸ್ತಕದಲ್ಲಿ ಐದು ಭಾಗಗಳಿದ್ದು ಮೊದಲ ಭಾಗದಲ್ಲಿ ಲೇಖಕರು ಎರೆಹುಳುವಿನ ಬಾಹ್ಯ ಮತ್ತು ಒಳ ಅಂಗ ರಚನೆ, ಶರೀರ ಕ್ರಿಯೆ, ಅದರ ಪರಿಸರ, ಹಂಚಿಕೆ, ಆಹಾರಾಭ್ಯಾಸ, ಮತ್ತು ಜೀವನ ಚಕ್ರದ ಮೇಲೆ ಬೆಳಕು ಚೆಲ್ಲುತ್ತಾರೆ.

ಎರಡನೆಯ ಭಾಗದಲ್ಲಿ ಮಣ್ಣಿನ ಫಲವತ್ತತೆಯ ನಿರ್ವಹಣೆಯಲ್ಲಿ, ಎರೆಹುಳುವಿನ ಪಾತ್ರವನ್ನು ವಿವರಿಸಲಾಗಿದೆ.

ಮೂರನೆಯ ಭಾಗದಲ್ಲಿ ಕೃಷಿಯಲ್ಲಿ ಎರೆಹುಳುಗಳನ್ನು ಹೇಗೆ ಪರಿಣಾಮಕಾರಿಯಾಗಿ ಉಪಯೋಗಿಸಬಹುದು ಎಂದು ವಿವರಿಸಿದ್ದಾರೆ. ಬೇರೆ ಬೇರೆ ಮೂಲದ ಸಾವಯುವ ಪದಾರ್ಥ ಬಳಸಿ ಎರೆಕೃಷಿ, ಎರೆಗೊಬ್ಬರ ಬಳಸಿ ನಡೆಸಿದ ಕ್ಷೇತ್ರ ಪ್ರಯೋಗಗಳ ಫಲಿತಾಂಶ, ಮತ್ತು ಎರೆಗೊಬ್ಬರದಲ್ಲಿರುವ ಪೋಷಕಾಂಶಗಳ ವಿವರ ಇದೆ.

ನಾಲ್ಕನೆಯ ಭಾಗದಲ್ಲಿ ಸೂಕ್ತ ಎರೆಹುಳು ಜಾತಿಯ ಆಯ್ಕೆ ಆರೈಕೆ, ಬೇರೆ ಬೇರೆ ವಿಧಾನದಲ್ಲಿ ಎರೆಹುಳುಗಳ ಸಾಕಣೆ ವಹಿಸಬೇಕಾದ ಮುನ್ನೆಚ್ಚರಿಕೆಗಳು, ಸಾವಯುವ ಪದಾರ್ಥಗಳ ತಯಾರಿ, ಎರೆಹುಳುವಿನ ಶತ್ರುಗಳು, ಇತ್ಯಾದಿ ವಿವರಗಳಿವೆ.

ಪಶು ಆಹಾರವಾಗಿ ಎರೆಹುಳುಗಳನ್ನು ಬಳಸುವ ರೀತಿ - ವರ್ಮ್ ಮೀಲ್, ವರ್ಮಿವಾಶ್, ಎರೆಹುಳು ತೊಳೆದ ನೀರು - ಇವುಗಳನ್ನು ಬಳಸಿದ ಪ್ರಯೋಗ ಫಲಿತಾಂಶ ಇತ್ಯಾದಿಗಳನ್ನೊಳಗೊಂಡಿದೆ.

ಪುಸ್ತಕದ ಕೊನೆಯ ಭಾಗದಲ್ಲಿ ಸಾವಯುವ ಗೊಬ್ಬರದಿಂದಾಗುವ ಲಾಭಗಳು, ಆರ್ಥಿಕ ಸಾಧ್ಯಾಸಾಧ್ಯತೆಗಳ ಬಗ್ಗೆಯೂ ಚಿತ್ರಣ ಇದೆ. ಕೊನೆಯಲ್ಲಿ ಸುಮಾರು 60 ಎರೆ ಕೃಷಿ ಕೈಗೊಂಡಿರುವ ವ್ಯಕ್ತಿ ಮತ್ತು ಸಂಸ್ಥೆಗಳ ವಿಳಾಸ ಇದೆ. ಸೂಕ್ತ ವರ್ಣಚಿತ್ರಗಳನ್ನು ಒಳಗೊಂಡಿದೆ.

ಆಂಗ್ಲ ಭಾಷೆಯಲ್ಲಿರುವ ಪುಸ್ತಕ ಕನ್ನಡದಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತೇನೋ ಎಂದನಿಸುತ್ತದೆ. ಒಟ್ಟಿನಲ್ಲಿ ಎರೆಹುಳು ಎರೆಕೃಷಿಯ ಬಗ್ಗೆ ಸಮಗ್ರ ಚಿತ್ರಣ ಕೊಡುವ ಪುಸ್ತಕವಿದು.

ಪರಿಚಯ : ವಾಸುದೇವ, ಅದಮಾರು

ಲೇ : ಡಾ. ರಾಧಾ ಡಿ. ಕಾಳೆ, ಪ್ರಿಸಂ ಬುಕ್ಸ್ ಪ್ರೈ ಲಿ.
53/2, ಬಸವನ ಗುಡಿ ರಸ್ತೆ, ಬೆಂಗಳೂರು - 19
ಬೆಲೆ : ರೂ 120

ಕರ್ನಾಟಕ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಗ್ರಾಮ ಅರಣ್ಯ ಸಮಿತಿ ರಚನೆ - ಕೆಲವು ಮಾರ್ಗದರ್ಶಿ ಸೂತ್ರಗಳು

ಪ್ರಕಾಶಕರು : ಜನಪರ ಪ್ರಕಾಶನ,
ಗುರುವಾಯನ ಕೆರೆ - 574217
ಬೆಲೆ - 8.00

ಕರ್ನಾಟಕ ಅರಣ್ಯ ಇಲಾಖೆ ಅರಣ್ಯವನ್ನು ಉಳಿಸಲಿಕ್ಕಾಗಿ, ಸ್ಥಳೀಯ ಗ್ರಾಮುಸಮುದಾಯವನ್ನು ಸೇರಿಸಿಕೊಂಡು ಕೆಲಸ ಮಾಡುವ ಉದ್ದೇಶದಿಂದ ಆರಂಭಿಸಿದ ಯೋಜನೆ ಕರ್ನಾಟಕ ಜಂಟಿ ಅರಣ್ಯ ಯೋಜನೆ" ಗ್ರಾಮಾರಣ್ಯಗಳ ಒಡೆತನವನ್ನು ಜನಸಮುದಾಯಕ್ಕೆ ನೀಡುವ ಉದ್ದೇಶದಿಂದ ಗ್ರಾಮಾರಣ್ಯ ಸಮಿತಿಗಳನ್ನು ನೇಮಿಸಿ ಗ್ರಾಮದ ಅರಣ್ಯವನ್ನು ಈ ಸಮಿತಿಗಳ ಅಧಿಕಾರಕ್ಕೆ ಒಳಪಡಿಸುವ ಪ್ರಯತ್ನ ಹಲವು ಕಡೆ ಆರಂಭವಾಗಿದೆ. ಈ ನಿಟ್ಟಿನಲ್ಲಿ ಪ್ರಕಾಶಕರೇ ಹೇಳಿರುವಂತೆ ವ್ಯಕ್ತಿ, ಸಂಸ್ಥೆ, ಪಂಚಾಯತ್ ಹಾಗೂ ಜನ ಪ್ರತಿನಿಧಿಗಳು ಹೇಗೆ ಈ ಅರಣ್ಯ ನಿರ್ವಹಣೆಯ ಕಾರ್ಯ ಸಾಧಿಸಬಹುದು ಎಂಬುದರ ಕುರಿತಾದ ಮಾಹಿತಿ ನೀಡುವುದೇ ಈ ಪುಸ್ತಕದ ಉದ್ದೇಶ.

ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ, ಗ್ರಾಮ ಅರಣ್ಯ ಸಮಿತಿಗಳು, ಈ ಸಮಿತಿಗಳಲ್ಲಿ ಸದಸ್ಯತ್ವ, ಈ ಸಮಿತಿಯ ರಿಜಿಸ್ಟ್ರೇಶನ್, ಈ ಆರಣ್ಯ ಸಮಿತಿಯ ನಿರ್ವಹಣ ಸಮಿತಿ, ಸಮಿತಿಯ ಆಯ್ಕೆ ಹೀಗೆ ಉಖ್ಯವಾಗಿ 8 ಉಪವಿಭಾಗಗಳಲ್ಲಿ ವಿಷಯಗಳನ್ನು ವಿವರಿಸಲಾಗಿದೆ. ಇದರ ಜೊತೆಗೆ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕುರಿತು ಕರ್ನಾಟಕ ಸರಕಾರದ ಆದೇಶ, ಗ್ರಾಮ ಅರಣ್ಯ ಸಮಿತಿಯ ಮಾದರಿ ಉಪನಿಧಿಗಳನ್ನು ಅನುಬಂಧಗಳಾಗಿ ಮುದ್ರಿಸಲಾಗಿದೆ. ಒಟ್ಟಾರೆ ಪುಸ್ತಕ ಹಕ್ಕು, ಕರ್ತವ್ಯ ಜೊತೆಗೆ ಕಾನೂನುಗಳನ್ನು ಸ್ಪಷ್ಟವಾಗಿ ವಿವರವಾಗಿ ಚಿತ್ರಿಸಿದೆ.

ಸ್ವಯಂಸೇವಾ ಸಂಸ್ಥೆಗಳು, ಅರಣ್ಯ ಇಲಾಖೆಯ ಸಿಬ್ಬಂದಿಗಳು ಮತ್ತು ಜಂಟಿ ಅರಣ್ಯಯೋಜನೆಯಲ್ಲಿ ಪಾಲ್ಗೊಳ್ಳುವ ಎಲ್ಲಾ ಜನರಿಗೂ ಈ ಪುಸ್ತಕ ಉಪಯುಕ್ತ ಕೈಪಿಡಿಯಾಗಿದೆ.

ಪ್ರತಿಕ್ರಿಯೆ

ಮಾನ್ಯರೆ,

1998 ಹಿತ್ತಲಗಿಡದ ಸಂಚಿಕೆ 2 ಹಾಗೂ 3 ರಲ್ಲಿ ಮೂಡಿ ಬಂದಿರುವ ನಾಟಿ ತಳಿಗಳ ವಿವರದಿಂದ ರೈತರಿಗೆ ನಾಟಿ ತಳಿಗಳ ಬಗ್ಗೆ ಆಸಕ್ತಿ ಹುಟ್ಟಿಸಬಹುದೆಂದು ನಾನು ಭಾವಿಸಿದ್ದೇನೆ. ಒಣ ಭೂಮಿ ಕೃಷಿಯ ಭತ್ತದ ತಳಿಗೆ ಸಂಬಂಧಿಸಿದಂತೆ ಭತ್ತದ ಕಾಳಿನ ಗಾತ್ರದ (ಸಣ್ಣ, ದಪ್ಪ, ಉದ್ದ, ಗಿಡ್ಡ) ಕುರಿತು ಇನ್ನೂ ವಿವರ ಬೇಕಾಗಿತ್ತು. ರಾಯಚೂರು ಜಿಲ್ಲೆಯಲ್ಲಿ ಹೆಚ್ಚಾಗಿ ಸಣ್ಣ ಕಾಳಿನ ಅಕ್ಕಿಯನ್ನು ಉಪ ಯೋಗಿಸುತ್ತಾರೆ. ದಪ್ಪಕಾಳು ಮಂಡಕ್ಕಿ ಹಾಗೂ ಅವಲಕ್ಕಿಗೆ ಉಪಯೋಗಿಸುತ್ತಾರೆ.

ಚೆನ್ನಬಸವರೆಡ್ಡಿ ಪಾಟೀಲ, ಹೆಂಬರಾಳ, ರಾಯಚೂರು.

ಮಾನ್ಯ ಸಂಪಾದಕರೆ,

ನಾನು ಪ್ರಥಮ ಬಿ.ಎ. ವಿಧ್ಯಾರ್ಥಿನಿ. ತಮ್ಮ ಪತ್ರಿಕೆಯು ತುಂಬ ಉಪಯುಕ್ತ ಲೇಖನಗಳನ್ನು ಕೂಡಿ ಬರುತ್ತಿದೆ. ಪತ್ರಿಕೆಯು ಚಾತುರ್ಮಾಸಿಕದಿಂದ ಮಾಸಿಕ ಪತ್ರಿಕೆಯಾದರೆ ತುಂಬಾ ಉಪಯುಕ್ತ. ದೇಶೀಯ ಹತೋಟಿ ಕ್ರಮಗಳು; ಲೇಖನ ಬಹಳ ಉಪ ಯುಕ್ತವಾಗಿದೆ. ಹಿತ್ತಲಗಿಡ ಪತ್ರಿಕೆ ಸದಾ ಚಿರಾಯುವಾಗಲಿ. ಇದರಲ್ಲಿ ನಮಗೂ ಯಾವುದಾದರೂ ಲೇಖನ ಬರೆಯುವ ಅವಕಾಶವಿದ್ದರೆ ತಿಳಿಸಿ.

ಎಮ್.ಎಸ್. ರೇಖಾ ಮಾದರಹಳ್ಳಿ, ಟೀ. ನರಸಿಪುರ ತಾಲ್ಲೂಕು.

(ಹಿತ್ತಲಗಿಡಕ್ಕೆ ಬರೆಯುತ್ತೇನೆ ಎನ್ನುವವರಿಗೆಲ್ಲಾ ಸ್ವಾಗತ. ನಿಮ್ಮ ಮಧ್ಯದಲ್ಲೇ ಇರುವ ಸ್ಥಳೀಯ ಜಾಣ್ಮೆ, ಸಂಪನ್ಮೂಲ, ಪರಂಪರಾಗತವಾಗಿ ಉಳಿದು ಬೆಳೆದು ಬಂದಿರುವ ಪದ್ಧತಿಗಳ ಮೌಲ್ಯವನ್ನು ಗುರುತಿಸಲು ಪ್ರಯತ್ನಿಸಿ, ಬೆಳಕಿಗೆ ತನ್ನಿ, ಇತರರೊಂದಿಗೆ ಹಂಚಿಕೊಳ್ಳಲು ಲೇಖನ ಬರೆದು ಕಳಿಸಿ. - ಸಂ.)

ಮಾನ್ಯರೆ,

ಜನವರಿ-ಎಪ್ರಿಲ್ ಹಿತ್ತಲಗಿಡ ತಲುಪಿತು. ಪುಟ 16 ರಲ್ಲಿ ಪ್ರಕಟವಾದ ಸಾಮಾನ್ಯರ ಅಸಾಮಾನ್ಯ ಶೋಧನೆಗಳಿ ಗೊಂದು ಪುರಸ್ಕಾರ ಓದಿದೆ. ಡಿ.ಎಸ್.ಟಿಗೆ ಬರೆದರೆ ನಿಮಗೆ ಅರ್ಜಿಫಾರ್ಮ್ ಬರುತ್ತದೆ. ಅದನ್ನು ತುಂಬುವುದು ಸಾಮಾನ್ಯರಿಂದ ಖಂಡಿತಾ ಅಸಾಧ್ಯ. ಅಷ್ಟೊಂದು ಕಲಂಗಳು ಪ್ರತಿಯೊಂದರ ವಿವರ ನೀಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಇಂಗ್ಲೀಷ್‌ನಲ್ಲಿ ಬರೆಯಬೇಕು. ಇದು ಅಣ್ಣಾಸಾಹೇಬರಂತಹ ಸಾಮಾನ್ಯರಿಂದ ಸಾಧ್ಯವೇ ? ಕಷ್ಟಪಟ್ಟು ತುಂಬಿಸಿ ಕಳುಹಿಸಿದರೂ ಆ ನಿಮ್ಮ ಸಂಶೋದನೆ ನೆರವಿಗೆ ಅರ್ಹವಲ್ಲ ಎಂದು ಕಾರಣವನ್ನೂ ನೀಡದೆ ತಿರಸ್ಕರಿಸುತ್ತಾರೆ. ಇದೆಲ್ಲವೂ ತಥಾಕಥಿತ ಸರಕಾರಿ ವಿಜ್ಞಾನಿಗಳಿಗೆ ಹಣ ನುಂಗಲು ಇರುವ ಯೋಜನೆಗಳೇ ಹೊರತು ಜನಸಾಮಾನ್ಯರಿಗಲ್ಲ.

ಅರ್ಜಿಸಲ್ಲಿಸಿ ಪೇಟೆಂಟ್ ಸಿಗಬೇಕಾದರೆ ಮೂರು ವರ್ಷ ಬೇಕು ಇಂದಿನ, ಹೊಸ ಸಂಶೋಧನೆ 6 ತಿಂಗಳಲ್ಲೇ ಹಳೆಯದಾಗುವ ವೇಗದ ಯುಗದಲ್ಲಿ ಮೂರು ವರ್ಷದ ಬಳಿಕ ಪೇಟೆಂಟ್ ಸಿಕ್ಕಿ ಪ್ರಯೋಜನವೇನು ?.

ಸುದರ್ಶನ, ಪುತ್ತೂರು

ಅರಳೀಕಟ್ಟೆ

ಸಮಕಾಲೀನ ವಿಚಾರಗಳಿಗೆ ಸನಾತನ ಹೋಲಿಕೆಗಳ ಹುಡುಕಾಟ

ದೆಹಲಿಯ ಮೋತಿಲಾಲ್ ಬ್ರಹ್ಮಾರಾಜ್ ಧರ್ಮಾರ್ಥ ಸಂಸ್ಥೆಯ ಆಶ್ರಯದಲ್ಲಿ ಈ ಗೋಷ್ಠಿ ಹೃಷೀಕೇಶದಲ್ಲಿ ದಿನಾಂಕ ನವಂಬರ್ 28 ರಿಂದ ನಡೆಯಲಿದೆ. ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳು ಹಾಗೂ ಆರ್ಥಿಕ ನ್ಯಾಯ ಮತ್ತು ತೆರಿಗೆ ಪದ್ಧತಿಗಳು ಈ ಎರಡು ವಿಷಯಗಳಲ್ಲಿ ಪ್ರಬಂಧ ಮಂಡಿಸಲು ಆಸಕ್ತರನ್ನು ಆಹ್ವಾನಿಸಲಾಗಿದೆ.

ಆರ್ಥಿಕ ಬೆಳವಣಿಗೆಯ ಜೊತೆಗೆ ಎಲ್ಲಾ ಮಾನವರ ಸುಖ ಸಾಧ್ಯವೇ ? ಹಿಂದಿನ ತ್ಯಾಗ ತತ್ವಕ್ಕೂ - ಈಗಿನ ಭೋಗ ಸಂಸ್ಕೃತಿಗೂ ಹೋಲಿಕೆ ಸಾಧ್ಯವೇ ? 'ಮನುಸ್ಮೃತಿ' ಕೌಟಿಲ್ಯನ ಅರ್ಥ ಶಾಸ್ತ್ರ ಇವುಗಳು ಈಗಿನ ಆರ್ಥಿಕ ಬೆಳವಣಿಗೆ, ತೆರಿಗೆ ಪದ್ಧತಿ ಹಾಗೂ ಕನಿಷ್ಠ ಕೂಲಿ ಈ ಪ್ರಶ್ನೆಗಳಿಗೆಲ್ಲಾ ಏನಾದರೂ ಉತ್ತರ ಕೊಟ್ಟೀತೆ ಎಂಬ ಹುಡುಕಾಟದ ಪ್ರಯತ್ನ ಮಾಡುವ ಉದ್ದೇಶ ಈ ಗೋಷ್ಠಿಯದು. ಆಸಕ್ತರು ಹೆಚ್ಚಿನ ವಿವರಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು.

MOTILAL BHIMRAJ CHARITY TRUST, A 732,
Modern Society, Sector 15, Rohini, DELHI - 110 085.

ಮುಕ್ತವ್ಯಾಪಾರ ಮತ್ತು ವಿಶ್ವವ್ಯಾಪಾರ ಸಂಘಟನೆಗಳ ವಿರುದ್ಧದ ದ್ವಿತೀಯ ಜಾಗತಿಕ ಸಮ್ಮೇಳನ

ಕರ್ನಾಟಕ ರಾಜ್ಯ ರೈತ ಸಂಘದ ಸಹಯೋಗದೊಡನೆ ಈ ಮೇಲಿನ ಸಮ್ಮೇಳನ ಬೆಂಗಳೂರಿನಲ್ಲಿ ಅಗಸ್ಟ್ 23-26 ರ ವರೆಗೆ ಜರುಗಿತು. ವಿಶ್ವದಾದ್ಯಂತ ಅದರಲ್ಲೂ ಮುಖ್ಯವಾಗಿ ಯುರೋಪಿನ ನೂರಾರು ತರುಣ ತರುಣಿಯರು ಆಗಮಿಸಿದ್ದು ಬಹುರಾಷ್ಟ್ರೀಯ ಬಂಡವಾಳದ ಮೂಲಕ ಪಶ್ಚಿಮದ ಬಂಡವಾಳಶಾಹಿ ವಿಶ್ವವನ್ನೇ ಕಬಳಿಸ ಹೊರಟಿರುವುದರ ವಿರುದ್ಧ ಅಹಿಂಸಾತ್ಮಕ ಹೋರಾಟಕ್ಕೆ ಈ ಸಮ್ಮೇಳನ ಒತ್ತುಕೊಟ್ಟಿತು. ಹಿರಿಯ ಸಮಾಜವಾದಿ ಕಿಶನ್ ಪಟ್ನಾಯಕ್, ಮಹಾರಾಷ್ಟ್ರದ ರೈತ ಮುಖಂಡ ಜಾವಂದಿಯ, NAPMನ ಥಾಮಸ್ ಕೊಚೋರಿ ಮೊದಲಾದ ಜನಪರ ಹೋರಾಟಗಳ ಮುಂಚೂಣಿಯಲ್ಲಿರುವ ಮುಖಂಡರು ಇದರಲ್ಲಿ ಪಾಲ್ಗೊಂಡಿದ್ದರು.

-: ಜಾಗತಿಕರಣ ಮತ್ತು ಭಾರತೀಯ ಕೃಷಿ :-

ಈ ಮೇಲಿನ ವಿಚಾರದ ಮೇಲೆ ಸಮಾಜವಾದಿ ದುರೀಣ ಕಿಶನ್ ಪಟ್ನಾಯಕ್ 25-8-1999 ರಂದು ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಉಪನ್ಯಾಸವನ್ನು ಹಿತ್ತಲಗಿಡ ಪತ್ರಿಕೆ ಏರ್ಪಡಿಸಿತ್ತು.

ಪತ್ರಿಕೆ ನೊಂದಣಿ ಸಂಖ್ಯೆ 66842/96

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ. 5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್ / ಚೆಕ್ ಮೂಲಕ ***"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"*** ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ವಿಳಾಸ:
ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065.
✆ : 8563595 \ 3330153 Ext.297 (O) 8560267 (R)
e-mail : hittalu@bgl.vsnl.net.in

ಗೆ, ------------------------------------

Printed by Sri.S. Sridhar, Published by Smt. K. Meenakshi (Owner), printed at "Navbharath Enterprises" No. 10, Sirur Park 'B' Street, Seshadripuram, Bangalore - 560 020. and Published at No. 399, 14-B Cross New Town Yelhanka, Bangalore - 560 064. Edited by Dr. T.N. Prakash.